ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿರುವ ಸರ್ಕಾರಿ ಕಾಲೇಜುಗಳ ಬಗ್ಗೆ ಮಾನ್ಯ ವಿದ್ಯಾಮಂತ್ರಿಗಳು ಹೇಳಬೇಕಾಗುತ್ತದೆ, ಸರ್ಕಾರಿ ಕಾಲೇಜಿನ ಪರಿಸ್ಥಿತಿ ಬೆಂಗಳೂರಿನಲ್ಲಿ ಏನಾಗಿದೆ ಎಂದು ಹೇಳಬೇಕು.

ಅಧ್ಯಕ್ಷರು : ನೀವು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿ. ಬೇರೆ ರೂಪದಲ್ಲಿ ಅದನ್ನು ತೆಗೆದುಕೊಳ್ಳೋಣ. ಅಷ್ಟೊಂದು ಮುಖ್ಯವಾಗಿದ್ದಿದ್ದರೆ ನೀವು ಪ್ರಶ್ನೆ ಕಳುಹಿಸಬೇಕಾಗಿತ್ತು. ಮುಂದಿನ ಪ್ರಶ್ನೆ ಶ್ರೀ ಶಿವಾನಂದ ಪಾಟೀಲರು ಕೇಳಬೇಕು.

ಬಿಜಾಪುರ ತಾಲ್ಲೂಕು ಬಬಲೇಶ್ವರ ಗ್ರಾಮಕ್ಕೆ ಕುಡಿಯುವ ನೀರಿನ ಯೋಜನೆ

412 - ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ತಾಲ್ಲೂಕು ಬಬಲೇಶ್ವರ ಗ್ರಾಮಕ್ಕೆ ಒದಗಿಸಲಾದ ನೆದರ್‌ಲ್ಯಾಂಡ್ ಕುಡಿಯುವ ನೀರಿನ ಯೋಜನೆಯು ಇದುವರೆಗೆ ಮುಗಿಯದಿರಲು ಕಾರಣವೇನು?

ಆ) ಪ್ರಗತಿಯು ಯಾವ ಹಂತದಲ್ಲಿದೆ, ಇದಕ್ಕಾಗಿ ಇಲ್ಲಿಯವರೆಗೂ ಮಾಡಿದ ಖರ್ಚಿನ ವಿವರ ಒದಗಿಸುವುದು

ಇ) ಈ ಯೋಜನೆಯ ಕಾಮಗಾರಿಗಳ ಗುಣಮಟ್ಟವನ್ನು ಸರ್ಕಾರ ಪರಿಶೀಲಿಸಿದೆಯೆ?

ಈ) ಈ ಯೋಜನೆಯನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಬಿಜಾಪುರ ತಾಲ್ಲೂಕು ಬಬಲೇಶ್ವರ ಗ್ರಾಮಕ್ಕೆ ಒದಗಿಸಲಾದ ನೆದರ್‌ಲ್ಯಾಂಡ್ ಕುಡಿಯುವ ನೀರಿನ ಯೋಜನೆಯು ಅಕ್ಟೋಬರ್ 1999ರಲ್ಲಿ ಮುಗಿದಿರುತ್ತದೆ.

ಆ) ಕಾಮಗಾರಿಯು ಅಕ್ಟೋಬರ್ 1999ರಲ್ಲಿ ಮುಗಿದಿರುತ್ತದೆ. ಅದಕ್ಕೆ ತಗುಲಿದ ವೆಚ್ಚ ರೂ.198.00 ಲಕ್ಷಗಳು.

ಇ) ಹೌದು.

ಈ) ಈ ಮೇಲೆ ನಮೂದಿಸಿರುವಂತೆ ಯೋಜನೆಯು ಅಕ್ಟೋಬರ್ 1999ರಲ್ಲಿ ಪೂರ್ಣಗೊಂಡಿರುತ್ತದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಈ ನೆದರ್‌ಲ್ಯಾಂಡ್ ಯೋಜನೆಯಲ್ಲಿ ಬಿಜಾಪುರ ತಾಲ್ಲೂಕಿನ ಬಬಲೇಶ್ವರ ಗ್ರಾಮದಲ್ಲಿ ಒಂದು ಕುಡಿಯವ ನೀರಿನ ಯೋಜನೆಯನ್ನು ಕೈಗೊಂಡಿದ್ದೆವು. ಅದು ಪೂರ್ಣವಾಗಿದೆ ಎಂದು ಅಕ್ಟೋಬರ್ 1999ರಲ್ಲಿ ಉತ್ತರವನ್ನು ಕೊಟ್ಟಿದ್ದೀರಿ. ಆದರೆ ಅಕ್ಟೋಬರ್1999ರಿಂದ ಅವರು ಎಷ್ಟು ನೀರನ್ನು

ಪಂಪ್ ಮಾಡಿದ್ದಾರೆ ಎಂಬ ಬಗ್ಗೆ ಅವರೇನಾದರೂ ವರದಿಯನ್ನು ಕೊಟ್ಟಿದ್ದಾರಾ? ಕೊಡದೇ ಇದ್ದರೆ ಏಕೆ ನೀರನ್ನು ಪಂಪ್ ಮಾಡಿಲ್ಲ ಎನ್ನುವ ಬಗ್ಗೆ ತಾವು ಸವಿಸ್ತಾರವಾಗಿ ಹೇಳಬೇಕು. ಇದೊಂದು ವಿಚಾರ. ಎರಡನೆಯದು ನನಗೆ ಗೊತ್ತಿರುವ ಮಟ್ಟಿಗೆ ಆ ಸ್ಕೀಮನ್ನು ಪೂರ್ಣ ಮಾಡಬೇಕಾದರೆ ಮಿನಿಮಮ್ 16 ಗಂಟೆಗಳ ಕಾಲ ಕರೆಂಟನ್ನು ಸಪ್ಲೈ ಮಾಡಬೇಕಾಗುತ್ತದೆ. ಕರೆಂಟ್‌ನದು ಸಾಮಾನ್ಯವಾದ ತೊಂದರೆ ಇಡೀ ರಾಜ್ಯದಲ್ಲಿದೆ. ಲೋ ವೋಲ್ಟೇಜ್ ಪ್ರಾಬ್ಲಮ್ ಇರುವ ಕಾರಣದಿಂದ ನಾವು ಒಂದು ಸಲಹೆ ಮಾಡಿದ್ದೆವು. ನೀವು ಎರಡು ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಖರ್ಚು ಮಾಡಿದ್ದೀರಿ. ಆದರೆ ಆ ಯೋಜನೆಗೆ ಇರುವುದೇ ಒಂದು ಕೋಟಿ 10 ಲಕ್ಷ ರೂಪಾಯಿಗಳು ನೀವು ಎರಡು ಕೋಟಿ ರೂಪಾಯಿಗಳನ್ನು ಈಗ ಖರ್ಚು ಮಾಡಿದ್ದೀರಿ. ಐದು ಲಕ್ಷ ರೂಪಾಯಿ ಕೊಟ್ಟರೆ ಕೆಇಬಿಯವರು ಒಂದು ಎಕ್ಸ್‌ಪ್ರೆಸ್ ಫೀಡರ್ ಹಾಕಿಕೊಡುತ್ತೇನೆ ಎಂದು ಹೇಳಿದ್ದರು. ಅದನ್ನೂ ತಾವು ಮಾಡಲಿಲ್ಲ. ಅದು ಆಗದಿದ್ದರೆ ಅಟ್‌ಲೀಸ್ಟ್ ಒಂದು ಜನರೇಟರ್ ಆದರೂ ಕೊಡಿಸಿ, ನೀರನ್ನು ಪಂಪ್ ಮಾಡುವುದಕ್ಕೆ ಪ್ರಯತ್ನ ಮಾಡಬಹುದು ಎಂದು ಹೇಳಿ ನಾವು ಎರಡು ಸಲಹೆಯನ್ನು ಕೊಟ್ಟಿದ್ದೆವು. ಎರಡು ಸಲಹೆಯಲ್ಲಿ ಒಂದು ಸಲಹೆಯನ್ನೂ ಗಣನೆಗೆ ತೆಗೆದುಕೊಂಡಿಲ್ಲ. ಒಂದು ಕೋಟಿ ರೂಪಾಯಿ ಯೋಜನೆಗೆ ಎರಡು ಕೋಟಿ ರೂಪಾಯಿ ನೀವು ಖರ್ಚು ಮಾಡುತ್ತೀರಿ. ಆದರೆ ಖರ್ಚು ಮಾಡಿ ಆ ಊರಿಗೆ ನೀರೇ ಬರದಿದ್ದರೆ ಈ ಯೋಜನೆ ಹೇಗೆ ಪೂರ್ಣವಾಗುತ್ತದೆ ಎಂದು ತಾವು ದಯವಿಟ್ಟು ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ : ಸನ್ಮಾನ್ಯ ಅಧ್ಯಕ್ಷರೆ, ನನ್ನ ಮುಂದೆ ಇರತಕ್ಕ ಮಾಹಿತಿ ಪ್ರಕಾರ ಈ ಯೋಜನೆ ಸಂಪೂರ್ಣವಾಗಿ ಅಕ್ಟೋಬರ್ ತಿಂಗಳಲ್ಲಿ ಆಗಿದೆ. ಮಾಹಿತಿ ತಪ್ಪು ಇದ್ದರೆ ತಾವು ಹೇಳಿ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮ ಗೌಡ : ಮಾಹಿತಿ ತಪ್ಪು ಇದೆ. ನಾನು ಹೇಳುವುದನ್ನು ತಿಳಿದುಕೊಳ್ಳಿ. ನಾನು ವಿಷಯವನ್ನು ನರೇಟ್ ಮಾಡುವುದಕ್ಕೆ ಹೋಗಲಿಲ್ಲ. ನಾನು ನಿಮಗೆ ಸ್ಪೆಸಿಫಿಕ್ ಆಗಿ ಹೇಳಿದೆ. ನಿಮ್ಮವರು ಸ್ಕೀಮನ್ನು ಪೂರ್ಣ ಮಾಡಿದ್ದೇವೆಂದು ವರದಿ ಕೊಡುತ್ತಾರೆ. ಸ್ಕೀಮನ್ನು ಪೂರ್ಣ ಮಾಡಿದ ಮೇಲೆ ರಿಕ್ವೈರ್ಡ್ ಅಮೌಂಟ್ ಆಫ್ ವಾಟರನ್ನು ಅವರು ಪಂಪ್ ಮಾಡಬೇಕು. ಇಲ್ಲದಿದ್ದರೆ ಈ ಯೋಜನೆಯಿಂದ ಏನು ಪ್ರಯೋಜನ?

ಶ್ರೀ ಎಂ.ವೈ. ಘೋರ್ಪಡೆ : ನನ್ನಲ್ಲಿರುವ ಮಾಹಿತಿಯನ್ನು ಹೇಳಿ ಬಿಡುತ್ತೇನೆ. ಇದರ ಬಗ್ಗೆ ತಪ್ಪು ಅಭಿಪ್ರಾಯ ಬರಬಾರದು. ಈ ನೆದರ್‌ಲ್ಯಾಂಡ್ ಸ್ಕೀಮ್‌ನಲ್ಲಿ ಒಂದು ಕಾರ್ಯಕ್ರಮ ಇದೆ. ಇದರಲ್ಲಿ 196 ಲಕ್ಷ ರೂಪಾಯಿಗಳು ಖರ್ಚಾಗಿದೆ. ಮತ್ತೆ ಈಲ್ಡ್‌ಟೆಸ್ಟ್ ಮಾಡಿದರೆ. 55 ಎಲ್‌ಪಿಸಿಡಿ ಅಲ್ಲಿ ಸಿಗುತ್ತದೆ ಎಂದು ಹೇಳಿ ನನ್ನ ಮುಂದೆ ರಿಪೋರ್ಟ್ ಕೊಟ್ಟಿದ್ದಾರೆ. ಮತ್ತೆ ಕ್ವಾಲಿಟಿ ಟೆಸ್ಟ್ ಮಾಡಿದ್ದಾರೆ ಎಂದು ಬರೆದಿದ್ದಾರೆ. ಆದಕಾರಣ ಇದರಲ್ಲಿ ಇನ್ನು ಏನಾದರೂ ಮಾಡುವುದಿದ್ದರೆ ದಯವಿಟ್ಟು ತಾವು ಹೇಳಿ. ಆದರೆ ಇದನ್ನು ಪೂರ್ಣ ಮಾಡುತ್ತಿದ್ದಾರೆ. ಜನ ನೀರನ್ನು ಅಕ್ಟೋಬರ್ ತಿಂಗಳಿಂದ ಉಪಯೋಗಿಸುತ್ತಿದ್ದಾರೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ನಾನೇ ನಿಮಗೆ ಹೇಳಿದೆ. ಈಗ ನಿಮಗೆ ಹೇಳುತ್ತಿದ್ದೇನೆ. ನೀವು ಡೈರೆಕ್ಟರ್ ಪಿಪಿಎಂಗೆ ದಯವಿಟ್ಟು ಫೋನ್ ಮಾಡಿ.

ಶ್ರೀ ಎಂ.ವೈ. ಘೋರ್ಪಡೆ : ಹೊಸದಾಗಿ ಹೇಳುತ್ತಿದ್ದಾರೆ. ನಾವು ಅವರ ಜೊತೆ ಮಾತನಾಡಿ ಏನು ಕೆಲಸ ಮಾಡಿಸಬೇಕೋ, ಆ ಕೆಲಸವನ್ನು ಮಾಡಿಸುವುದರಲ್ಲಿ ತೊಂದರೆ ಇಲ್ಲ.

ಅಧ್ಯಕ್ಷರು : ನಿಮ್ಮ ಪ್ರಾಬ್ಲಮ್ ಅನ್ನು ಸಾಲ್ವ್ ಮಾಡುತ್ತೇನೆ ಎಂದು ಹೇಳಿದ್ದಾರೆ. ನೀವು ಅವರ ಕಛೇರಿಗೆ ಹೋಗಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಹೇಳಿದ್ದಾರೆ. ಸ್ಕೀಮನ್ನು ಮಾಡಿದ್ದಾರೆ. ಇಷ್ಟೆಲ್ಲಾ ಹಣವನ್ನು ಖರ್ಚು ಮಾಡಿದರೂ ಅದು ಆಗಿಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಸಚಿವರ ಹತ್ತಿರ ಸಧ್ಯಕ್ಕೆ ಇನ್‌ಫರ್ಮೇಷನ್ ಇಲ್ಲದೇ ಇರಬಹುದು. ನಿಮ್ಮ ಪ್ರಾಬ್ಲಮ್ ಸಾಲ್ವ್ ಮಾಡಬೇಕು, ಸಾಲ್ವ್ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ನಾವು ಅಲ್ಲಿಗೆ ಹೋಗುತ್ತೇವೆ. ಪ್ರಾಬ್ಲಮ್ ಸಾಲ್ವ್ ಮಾಡುತ್ತಾರೆ. ನಾನು ಹೇಳುವುದನ್ನು ಕೇಳಿ. 63 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಬರೀ ಪೇಪರ್‌ನಲ್ಲಿ ಸ್ಕೀಮ್ ಪೂರ್ಣವಾಗಿದೆ ಇಡೀ ಬಿಜಾಪುರ ಜಿಲ್ಲೆಗೆ 63 ಕೋಟಿ ರೂಪಾಯಿ ಏಡ್ ಬಂದಿದೆ. ನೆದರ್‌ಲ್ಯಾಂಡ್ ಗವರ್ನಮೆಂಟ್‌ನವರು ಈ ಸ್ಕೀಮನ್ನು ಎಕ್ಸ್‌ಟೆನ್‌ಷನ್ ಮಾಡಿ ನೀವು ಯೋಜನೆಯನ್ನು ಪೂರ್ಣ ಮಾಡಬೇಕು ಎಂದು ಬೆನ್ನು ಹತ್ತಿದಮೇಲೆ ಅವರ ಸಲುವಾಗಿ ಇವರು ಪೇಪರ್‌ನಲ್ಲಿ ಯೋಜನೆಯನ್ನು ಪೂರ್ಣ ಮಾಡಿದ್ದಾರೆ. ಆದರೆ ವಾಸ್ತವವಾಗಿ ಎಲ್ಲವೂ ಅಪೂರ್ಣವಾದ ಕೆಲಸಗಳು. ನನ್ನಲ್ಲಿ ಇನ್ನೂ ಮೂರು ಯೋಜನೆ ವಿಚಾರ ಇದೆ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಘೋರ್ಪಡೆಯವರೆ, ನೀವು ಕಂಪ್ಲೀಟ್ ಆಗಿದೆ ಎಂದು ಹೇಳುತ್ತಿದ್ದೀರಿ, ಅವರು ಯಾವುದೂ ಪೂರ್ಣ ಆಗಿಲ್ಲ ಎಂದು ಹೇಳುತ್ತಿದ್ದಾರಲ್ಲ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ಅದಕ್ಕೆ ನಾನು ಅವರಿಗೆ ಹೇಳಿದ್ದುದು. ನಿಮ್ಮ ಡೈರೆಕ್ಟರ್ ಪಿಸಿಎಂಗೆ ಆದರೂ ಕರೆಸಿ ಇಲ್ಲ ಎಂದರೆ ಸೆಕ್ರೆಟರಿಗೆ ಸಪರೇಟ್ ರಿವ್ಯೂ ಮೀಟಿಂಗ್ ಮಾಡಲು ತಿಳಿಸಿ. ಇದು ನಮ್ಮದು ಮಾತ್ರ ಪ್ರಶ್ನೆ ಅಲ್ಲ. ಎಲ್ಲರದ್ದೂ ಪ್ರಶ್ನೆ ಇದೆ. ಬೇಕಾದರೆ ನಿಮ್ಮ ಹಿಂದೆ ಸದಸ್ಯರು ಇದ್ದಾರೆ, ಅವರನ್ನು ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ಜನರಲ್ ಆಗಿ ಎಲ್ಲಾ ಕಡೆ ಇದೆ. ನವಲಗುಂದ, ನರಗುಂದ ಎಲ್ಲಾ ಕಡೆ ನೆದರ್‌ಲ್ಯಾಂಡ್ ಸ್ಕೀಮ್ ಇದೆ. ಪೂರ್ಣವಾಗಿಲ್ಲ. ಬೈ ಫೋರ್ಸ್ ಆಗಿದೆ. ಇದು ಏನಾಗಿದೆ ಎಂದರೆ ನೆದರ್‌ಲ್ಯಾಂಡ್‌ನವರು ಏನು ಏಡ್ ಕೊಟ್ಟಿದ್ದರಲ್ಲ ಅವರ ಒತ್ತಾಯಕ್ಕೆ ಇದು ಎಲ್ಲಾ ಕಡೆ ಮುಗಿದಿದೆ ಎಂದು ಹೇಳುತ್ತಿದ್ದಾರೆ. ಆದರೆ ನಿಜವಾಗಿ ಅನುಷ್ಠಾನ ಆಗಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಬಹಳ ಸೀರಿಯಸ್ ಆಗಿ ಈ ವಿಚಾರವನ್ನು ತೆಗೆದುಕೊಳ್ಳಬೇಕು. ನಿಮ್ಮ ಅಧಿಕಾರಿಗಳು ಯೋಜನೆ ಮುಗಿದಿದೆ ಎಂದು ವರದಿ ಕೊಡುತ್ತಾರೆ. ಆದರೆ ಅದು ಹಾಗಾಗಿಲ್ಲ.

ಶ್ರೀ ಎಂ.ವೈ. ಘೋರ್ಪಡೆ : ನೆದರ್‌ಲ್ಯಾಂಡ್ ಕಾರ್ಯಕ್ರಮದ ಅಡಿಯಲ್ಲಿ 4-5 ಜಿಲ್ಲೆಗಳ 201 ಗ್ರಾಮಗಳಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ 70 ಕೋಟಿ ರೂಪಾಯಿ

ಖರ್ಚು ಮಾಡಿದ್ದಾರೆ. ಈ ಯೋಜನೆ ಪೂರ್ತಿ ಆಗಿದೆ. ಮತ್ತು ನೆದರ್‌ಲ್ಯಾಂಡಿನಿಂದ ಮಿಷನ್ ಬಂದು ಇದರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಆದಕಾರಣ ಒಟ್ಟಾರೆ ಈ ಕಾರ್ಯಕ್ರಮ ಫೈಲ್ ಆಗಿಲ್ಲ, ಯಶಸ್ವಿ ಆಗಿದೆ. ಇದರಲ್ಲಿ 149 ಹಳ್ಳಿಗಳಲ್ಲಿ ನಮ್ಮ ಲ್ಯಾಂಡ್ ಆರ್ಮಿಯಿಂದ ಕೆಲಸ ಮಾಡಿಸಿದ್ದೇವೆ. ಆದರೂ ಕೂಡ ಇದರಲ್ಲಿ 100ಕ್ಕೆ 100 ಸರಿ ಇದೆ, ಅದರಲ್ಲಿ ದೋಷ ಇರುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಹೇಳುತ್ತಾ ಇಲ್ಲ. ಇದನ್ನು ಯಾರು ಮಾಡಿದರೂ ಕೂಡ ಸರಿ. ನಮ್ಮ ಕಾರ್ಯಕ್ರಮವೇ ಆಗಲೀ ಎಕ್ಸ್‌ಟರ್ನಲ್ ಏಡೆಡ್ ಕಾರ್ಯಕ್ರಮವೇ ಆಗಲಿ, ಇದರಲ್ಲಿ ಪದೇ ಪದೇ ದೋಷಗಳು ಬಂದರೆ ಅದನ್ನು ಸರಿಪಡಿಸುವಂತಹ ವ್ಯವಸ್ಥೆಯನ್ನು ನಾವು ಮಾಡಬೇಕಾಗುತ್ತದೆ. ಇವತ್ತು ಹೊಸ ಜಿಲ್ಲಾ ಪಂಚಾಯತಿ ಇರುವುದರಿಂದ, ಜಿಲ್ಲಾ ಪಂಚಾಯತಿಯವರು ಅವರ ಸ್ವಾಧೀನ್ನು ಕರೆಸಿ ಅಲ್ಲೇನಾದರೂ ತೊಂದರೆ ಇದ್ದರೆ ನಮಗೆ ತಿಳಿಸಲಿ. ಅವರಿಂದ ಸರಿಪಡಿಸುವುದಕ್ಕೆ ಆಗದೇ ಇದ್ದರೆ ಸರ್ಕಾರಕ್ಕೆ ತಿಳಿಸಿದರೆ ಖಂಡಿತವಾಗಿಯೂ ನಾವು ಅದನ್ನು ಸರಿಪಡಿಸುತ್ತೇವೆ. ಏಕೆಂದರೆ 70 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ.

ಅಧ್ಯಕ್ಷರು : ನೀವು ಆಗಿಲ್ಲ ಎಂದು ಹೇಳುತ್ತಿದ್ದೀರಿ. ಅವರು ಆಗಿದೆ ಎಂದು ಹೇಳುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳನ್ನು ಸಚಿವರ ಕೊಠಡಿಗೆ ಕರೆಸಿ ಅವರಿಗೆ ಪನಿಷ್‌ಮೆಂಟ್ ಅಥವಾ ಹೇಗೆ ಬೇಕೋ ಹಾಗೆ ಮಾಡಿ. ಮಾನ್ಯ ಸಚಿವರು ಯೋಜನೆ ಪೂರ್ಣ ಆಗಿದೆ ಎಂದು ಹೇಳುತ್ತಾರೆ ನೀವು ಆಗಿಲ್ಲ ಎಂದು ಹೇಳುತ್ತೀರಿ.

(ಗೊಂದಲ)

ನಾವು ಯಾವುದನ್ನು ನಂಬೋಣ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಪ್ರತಿ ಒಂದು ಕಾರ್ಯಕ್ರಮದ ಬಗ್ಗೆ ಹೇಳಲಿಕ್ಕೆ ಹೇಗೆ ಆಗುತ್ತದೆ? ಅದಕ್ಕೆ ಸರಿಪಡಿಸುವ ಸಿಸ್ಟಂ ಇರಬೇಕು. ಯಾವುದಾದರೂ ದೋಷ ಇದ್ದರೆ ಅಥವಾ ಇನ್ನೇನಾದರೂ ಆಗಬೇಕಾದರೆ ಅಲ್ಲಿ ಯಾರು ನೋಡಬೇಕು? ನಾವು ಜಿಲ್ಲಾ ಪಂಚಾಯತಿಗೆ ಜವಾಬ್ದಾರಿ ವಹಿಸಿಕೊಟ್ಟಿದ್ದೇವೆ. ಅದು ಅವರ ಜವಾಬ್ದಾರಿ ಇದೆ. ನಮ್ಮ ಮಟ್ಟದಲ್ಲಿ ಕೂಡ ನಮ್ಮ ಇಲಾಖೆಯ ಚೀಫ್ ಇಂಜಿನಿಯರ್ ಇದ್ದಾರೆ. ಅವರನ್ನು ನಾನು ತಕ್ಷಣ ಕಳಿಸಿಕೊಡುತ್ತೇನೆ.

ಅಧ್ಯಕ್ಷರು : ನೀವು ಆಗಿಲ್ಲ ಎಂದು ಹೇಳುತ್ತೀರಿ, ಮಾನ್ಯ ಸಚಿವರು ಯೋಜನೆ ಪೂರ್ಣವಾಗಿದೆ ಎಂದು ಹೇಳುತ್ತಾರೆ. ಅಥವಾ ಅವರ ಛೇಂಬರಿಗೆ ಹೋಗಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಕರೆಸಿ ಇತ್ಯರ್ಥ ಮಾಡಿಸಿಕೊಳ್ಳಬಹುದು.

ಶ್ರೀ ಜಗದೀಶ್ ಶೆಟ್ಟರ್ : ಛೇಂಬರಿನಲ್ಲಿ ಕುಳಿತು ಮಾತನಾಡಿದರೆ ಇದು ಇತ್ಯರ್ಥ ಆಗುವುದಿಲ್ಲ. ಎನ್‌ಕ್ವೈರಿ ಮಾಡಿಸಬೇಕು.

ಅಧ್ಯಕ್ಷರು : ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳುತ್ತಿದ್ದಾರಲ್ಲ. ನಮ್ಮ ಚೀಫ್ ಇಂಜಿನಿಯರ್ ಹೋಗಿ ನೋಡಿಕೊಂಡು ಬರುತ್ತಾರೆಂದು ಹೇಳುತ್ತಿದ್ದಾರಲ್ಲ.

ಶ್ರೀ ಎಂ.ವೈ. ಘೋರ್ಪಡೆ : ವರದಿ ಏನು ಇದೆ, ಅದನ್ನು ತಮಗೆ ಕೊಡುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : ಈ ನೆದರ್‌ಲ್ಯಾಂಡ್ ಸ್ಕೀಮ್ ನಮ್ಮ ಹಾವೇರಿ ಜಿಲ್ಲೆಯ ಬಹುತೇಕ ಎಲ್ಲಾ ತಾಲ್ಲೂಕುಗಳಲ್ಲಿ ಈ ಸ್ಕೀಮನ್ನು ಅಳವಡಿಸಿದ್ದಾರೆ. ಜನರಲ್ ಆಗಿ ಅಲ್ಲಿ ಏನಾಗಿದೆ ಎಂದು ಹೇಳುತ್ತೇನೆ. ಒಂದು ಕೆಲಸವೂ ಪೂರ್ಣ ಆಗಿಲ್ಲ.

ಅಧ್ಯಕ್ಷರು : ಇದು ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತಹ ವಿಚಾರ. ಮಾನ್ಯ ಮಂತ್ರಿಗಳ ಹತ್ತಿರ ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತೆ ಮಾಹಿತಿ ಇದೆ.

ಶ್ರೀ ಕೆ.ಬಿ. ಕೋಳಿವಾಡ್ : ಜಿಲ್ಲಾ ಪಂಚಾಯತ್‌ನಲ್ಲಿ ನಾವು ಮೀಟಿಂಗ್ ಕರೆದು ನೆದರ್‌ಲ್ಯಾಂಡ್ ಆಫೀಸರ್ಸ್ ಅವರನ್ನು ಕರೆಸಿ ಅನೇಕ ಸಂದರ್ಭಗಳಲ್ಲಿ ಚರ್ಚೆ ಮಾಡಿದ್ದೇವೆ.

ಅಧ್ಯಕ್ಷರು : ನೀವು ಹಿರಿಯ ಸದಸ್ಯರು. ಅವರು ಏನು ಹೇಳಿದ್ದಾರೆ. ಚೀಫ್ ಇಂಜಿನಿಯರ್ ಅವರನ್ನು ಕಳಿಸಿಕೊಡುತ್ತೇನೆಂದು ಹೇಳಿದ್ದಾರೆ. ನೀವು ಅವರಿಗೆ ಪತ್ರ ಕೊಡಿ ನಿಮ್ಮ ಮಾಹಿತಿಯನ್ನೂ ತರಿಸಿಕೊಡುತ್ತಾರೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಇಡೀ ನೆದರ್‌ಲ್ಯಾಂಡ್ ಸ್ಕೀಮಿನ ಬಗ್ಗೆ ಸದನ ಸಮಿತಿಗೆ ಒಪ್ಪಿಸಿಬಿಡಿ.

ಅಧ್ಯಕ್ಷರು : ಸದನ ಸಮಿತಿ ಬೇಡ. ರಿವ್ಯೂ ಮಾಡಿ. ಮಾನ್ಯ ಘೋರ್ಪಡೆ ಅವರೆ, ಆ ನೆದರ್‌ಲ್ಯಾಂಡ್ ಸ್ಕೀಮ್ಸ್ ಬಗ್ಗೆ ಎಲ್ಲೆಲ್ಲಿ ಪ್ರೋಗ್ರಾಮ್ಸ್ ಇತ್ತೋ ಸಂಬಂಧಪಟ್ಟ ಅಫೀಸರ್ಸನ್ನು ಚೀಫ್ ಇಂಜಿನಿಯರ್ಸ್ ಅವರನ್ನು ಕರೆಸಿ ಒಂದು ರಿವ್ಯೂ ನಿಮ್ಮ ಕಛೇರಿಯಲ್ಲಿ ಮಾಡಿ ಸದನ ಸಮಿತಿ ಬೇಕಾಗಿಲ್ಲ.

(ಗೊಂದಲ)

ಶ್ರೀ ಎ. ರಾಮದಾಸ್ : ಚೀಫ್ ಇಂಜಿನಿಯರ್ ಯಾರು ತಪ್ಪು ಮಾಡಿದ್ದಾರೆ ಅವರೇ ಸರಿಯಾದಂತಹ ವರದಿಯನ್ನು ಕೊಡುವುದಿಲ್ಲ.

ಅಧ್ಯಕ್ಷರು : ನೀವು ರಿವ್ಯೂ ಮಾಡಿ, ರಿವ್ಯೂ ಮಾಡುತ್ತಾರೆ ಬಿಡಿ. ಮಾನ್ಯ ಕೋಳಿವಾಡ, ಇದು ಬಿಜಾಪುರಕ್ಕೆ ಸಂಬಂಧಪಟ್ಟಂತಹ ಪ್ರಶ್ನೆ ಇದೆ. ನೀವು ರಾಣೆಬೆನ್ನೂರಿಗೆ ಸಂಬಂಧಪಟ್ಟ ಮಾಹಿತಿ ಕೇಳಿದರೆ ಅವರ ಹತ್ತಿರ ಉತ್ತರ ಎಲ್ಲಿದೆ. ಈಗ ಮಾನ್ಯ ಎಸ್.ಎಸ್ ಪಾಟೀಲ್ ಅವರು ಕೇಳಿದರೆ ಹೇಳಬಹುದು. ಇದು ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತಹ ವಿಚಾರ. ಅದೂ ಪರ್ಟಿಕ್ಯುಲರ್ ತಾಲ್ಲೂಕಿನ ವಿಚಾರ ಅವರು ಕೇಳುತ್ತಿರುವುದು. ಅವರು ರಿವ್ಯೂ ಮಾಡುತ್ತಾರೆ. ನಿಮಗೆಲ್ಲಾ ನೋಟೀಸ್ ಕೊಟ್ಟು ಎಲ್ಲೆಲ್ಲಿ ಪ್ರೋಗ್ರಾಮ್ಸ್ ಇತ್ತೋ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ರಿವ್ಯೂ ಮಾಡುತ್ತಾರೆ.

ಶ್ರೀ ಕೆ.ಬಿ. ಕೋಳಿವಾಡ್ : ಜಿಲ್ಲಾ ಪರಿಷತ್‌ನಲ್ಲಿ ಈ ಕುರಿತು ನಿರ್ಣಯ ಕೈಗೊಂಡು ಅದನ್ನು ನೇರವಾಗಿ ನಾವು ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಟ್ಟಿರುವುದರಿಂದ ವಿಚಾರಣೆ ನಡೆಸಿ ಸಂಬಂಧಪಟ್ಟವರ ಮೇಲೆ ತಕ್ಷಣ ಕ್ರಮ ಕೈಗೊಳ್ಳಬೇಕು.

ಅಧ್ಯಕ್ಷರು : ಮಾನ್ಯ ಸಚಿವರು ಚೀಫ್ ಇಂಜಿನಿಯರ್ ಅವರನ್ನು ಕರೆಸಿ ರಿವ್ಯೂ ಮಾಡುತ್ತೇನೆಂದು ಹೇಳುತ್ತಿರುವಾಗ ಇನ್ನೇನು ಹೇಳುತ್ತೀರಿ ?

ಶ್ರೀ ಎ. ರಾಮದಾಸ್ : ಇದು ಇಡೀ ರಾಜ್ಯದ ಸಮಸ್ಯೆಯಾಗಿರುವುದರಿಂದ ಇದರ ಬಗ್ಗೆ ಸದನ ಸಮಿತಿ ರಚನೆಯಾಗಬೇಕು.

ಅಧ್ಯಕ್ಷರು : ಇದರ ಮುಖ್ಯ ಪ್ರಶ್ನೆ ಕೇಳಿರುವ ಮಾನ್ಯ ಸದಸ್ಯರಾದ ಶಿವಾನಂದ ಪಾಟೀಲ್‌ರವರು ಸದನ ಸಮಿತಿ ರಚನೆಯಾಗಬೇಕೆಂದು ಕೇಳುತ್ತಿಲ್ಲವಲ್ಲ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ರಿವ್ಯೂ ಮಾಡುವುದು ಬೇಡವೆಂದು ಹೇಳುವುದಿಲ್ಲ, ರಿವ್ಯೂವನ್ನು ಯಾವಾಗ ಬೇಕಾದರೂ ಮಾಡಿ. ಈ ಯೋಜನೆ ಪೂರ್ಣಗೊಂಡಿಲ್ಲವೆಂದು ಇಲಾಖೆಗೆ ನಾನು ಹತ್ತು ಪತ್ರಗಳನ್ನು ಬರೆದಿದ್ದೇನೆ, ಅದರ ರೆಫರೆನ್ಸ್ ಬೇಕಿದ್ದರೆ ತಮಗೆ ಒದಗಿಸಿಕೊಡುತ್ತೇನೆ. ಸುಮ್ಮನೆ ಈ ಒಂದು ವರದಿಯನ್ನು ಒದಗಿಸಿಕೊಡುವುದರ ಮೂಲಕ 99 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ತಿಳಿಸಿದ್ದಾರೆ. ನೆದರ್‌ಲ್ಯಾಂಡ್ ನೆರವಿನಿಂದ ಕುಡಿಯುವ ನೀರಿನ ಯೋಜನೆಯನ್ನು ನನ್ನ ಒಂದೇ ಕ್ಷೇತ್ರದಲ್ಲಿ ಹಮ್ಮಿಕೊಂಡಿಲ್ಲ. ಮಾನ್ಯ ಸದಸ್ಯರಾದ ಶ್ರೀ ಬಿ.ಆರ್. ಯಾವಗಲ್, ಕೆ.ಬಿ. ಕೋಳಿವಾಡ್ ಮತ್ತು ಬಿ.ಎಸ್. ಪಾಟೀಲ್ (ಸಾಸನೂರು) ಅವರ ಕ್ಷೇತ್ರಗಳಲ್ಲಿ ಸದರಿ ಯೋಜನೆಯನ್ನು ಹಮ್ಮಿಕೊಂಡಿರುವುದಲ್ಲದೆ ರಾಜ್ಯದ ಇತರ ಭಾಗದ ಕ್ಷೇತ್ರಗಳಲ್ಲೂ ಸಹ ಅನುಷ್ಠಾನಗೊಳಿಸಲಾಗುತ್ತದೆ. ಯೋಜನೆ ಅವರಿಗೂ ಹಾಗೂ ನನಗೂ ಸಂಬಂಧವಿದ್ದು, ಈ ಪ್ರಶ್ನೆ ಎಲ್ಲರಿಗೂ ಸಂಬಂಧಿಸಿದ್ದಾಗಿದೆ.

ಅಧ್ಯಕ್ಷರು : ಸದರಿ ಯೋಜನೆಯ ಬಗ್ಗೆ ಸಂಪೂರ್ಣವಾಗಿ ರಿವ್ಯೂ ಮಾಡುತ್ತಾನೆಂದು ನಾವು ಹೇಳುವುದು ಇನ್ನೇನಿದೆ ?

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ : ರಿವ್ಯೂ ಮಾಡಿದ್ದರೆ ಈ ಸಮಸ್ಯೆ ಬಗೆಹರಿಯುತ್ತಿತ್ತೆಂದು ನಾವು ಹೇಳುತ್ತಿದ್ದೆವು. ಆದರೆ, ಹಾಗಾಗಿಲ್ಲ. ಆದುದರಿಂದ ಈ ಬಗ್ಗೆ ಒಂದು ವಿಚಾರಣಾ ಆಯೋಗವನ್ನಾದರೂ ನಿಗದಿಪಡಿಸಿ, ಇಲ್ಲವೇ ಸದನ ಸಮಿತಿಯನ್ನಾದರೂ ರಚನೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ನೆದರ್‌ಲ್ಯಾಂಡ್‌ನವರ ಹಣಕಾಸಿನ ನೆರವಿನಿಂದ ಕುಡಿಯುವ ನೀರಿನ ಯೋಜನೆಯನ್ನು ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆಯೋ ಎಲ್ಲಾ ಕಡೆಗಳಿಂದಲೂ ದೂರುಗಳು ಬಂದಿವೆ. ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆ ಹಮ್ಮಿಕೊಂಡು ಅನುಷ್ಠಾನಗೊಳಿಸಲು ನೆದರ್‌ಲ್ಯಾಂಡ್‌ನವರು ಕೋಟ್ಯಾಂತರ ರೂಪಾಯಿಗಳ ನೆರವನ್ನು ರಾಜ್ಯಕ್ಕೆ ಕೊಟ್ಟಿದ್ದರೂ ಯೋಜನೆಯನ್ನು ಸರಿಯಾಗಿ ಅನುಷ್ಠಾನಗೊಳಿಸಿಲ್ಲದಿರುವುದರಿಂದ ಈ ವರ್ಷ ಕುಡಿಯುವ ನೀರಿಗೆ ರಾಜ್ಯಾದ್ಯಂತ ಹಾಹಾಕಾರವಿದೆ. ನೆದರ್‌ಲ್ಯಾಂಡ್‌ನವರು ಕೊಟ್ಟಿರುವ ಹಣವನ್ನು ಉಪಯೋಗಿಸಿರುವುದಿಲ್ಲ.

ಅಧ್ಯಕ್ಷರು : ಮಾನ್ಯ ಫೋರ್ಪಡೆಯವರೆ, ರಾಜ್ಯದಲ್ಲಿ ಎಲ್ಲೆಲ್ಲಿ ಈ ಯೋಜನೆಯನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಿಲ್ಲವೋ ಅಂತಹ ಕಡೆಗಳಲ್ಲಿ ಅನುಷ್ಠಾನಗೊಳಿಸುವ ದಿಸೆಯಲ್ಲಿ ತಕ್ಷಣ ರಿವ್ಯೂ ಮಾಡಿಸಿ.

(ಗೊಂದಲ)

ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ರಿವ್ಯೂ ಮಾಡುತ್ತೇನೆಂದು ಈಗ ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಇದನ್ನು ರಿವ್ಯೂ ಮಾಡಿದರೆ ಆಗುವುದಿಲ್ಲ. ಒಂದೇ ಕ್ಷೇತ್ರದಲ್ಲಿ ಈ ರೀತಿ ಆಗಿದ್ದರೆ ಪ್ರಶ್ನೆ ಬರುತ್ತಿರಲಿಲ್ಲ. ನೆದರ್‌ಲ್ಯಾಂಡ್ ನೆರವಿನ ಯೋಜನೆಯನ್ನು ರಾಜ್ಯದಲ್ಲಿ ಎಲ್ಲೆಲ್ಲಿ ಹಮ್ಮಿಕೊಂಡಿದ್ದಾರೋ ಅಲ್ಲೆಲ್ಲಾ ಯೋಜನೆ ಪೂರ್ಣಗೊಂಡಿರುವುದಿಲ್ಲ.

MR. SPEAKER : When the Minister has agreed to send a Chief Engineer, ಆ ರೀತಿ ಹೇಳಿದ್ದರೂ ನೀವು ಕೇಳುತ್ತಿಲ್ಲವಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನೆದರ್‌ಲ್ಯಾಂಡ್ ನೆರವಿನ ಕುಡಿಯುವ ನೀರಿನ ಯೋಜನೆ ರಾಜ್ಯದಲ್ಲಿ ಏನು ಅನುಷ್ಠಾನಗೊಳ್ಳುತ್ತಿದೆ, ನೆದರ್‌ಲ್ಯಾಂಡ್‌ನವರು ರಾಜ್ಯಕ್ಕೆ ಭೇಟಿ ಕೊಡುವಂಥ ಸಂದರ್ಭದಲ್ಲಿ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಿರಬೇಕು, ಇಲ್ಲದಿದ್ದರೆ ನೀಡಿರುವ ಅನುದಾನವನ್ನು ಹಿಂತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದರಿಂದ, ನೆದರ್‌ಲ್ಯಾಂಡ್ ದೇಶದ ಅಧಿಕಾರಿಗಳು ರಾಜ್ಯಕ್ಕೆ ಭೇಟಿ ಕೊಟ್ಟಂಥ ಸಮಯದಲ್ಲಿ ತೋರಿಕೆಗಾಗಿ ಅಧಿಕಾರಿಗಳು ಈ ರೀತಿಯ ವರದಿಯನ್ನು ಕೊಟ್ಟಿದ್ದಾರೆಯೇ ವಿನಾ ರಾಜ್ಯದಲ್ಲಿ ಎಲ್ಲೆಲ್ಲಿ ಸದರಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆಯೋ ಅಲ್ಲೆಲ್ಲಾ ಸಂಪೂರ್ಣವಾಗಿ ಅನುಷ್ಠಾನಗೊಂಡಿರುವುದಿಲ್ಲ.

MR.SPEAKER : The Minister has agreed to review the entire scheme.

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆ ಸದನ ಸಮಿತಿ ರಚನೆಯಾಗಬೇಕು, ಇಲ್ಲದಿದ್ದರೆ ವಿಚಾರಣಾ ಆಯೋಗವಾದರೂ ನೇಮಕವಾಗಬೇಕು, ಇದರಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಲೂಟಿಯಾಗಿದೆ.

ಶ್ರೀ ಅರಗ ಜ್ಞಾನೇಂದ್ರ : ರಾಜ್ಯದಲ್ಲಿ ಕುಡಿಯುವ ನೀರಿನ ಯೋಜನೆಯ ಅನುಷ್ಠಾನಕ್ಕಾಗಿ ವಿದೇಶದಿಂದ ತಂದಂಥ ಹಣವನ್ನು ವ್ಯವಸ್ಥಿತ ಸಂಚು ನಡೆಸಿ ನೀರುಪಾಲು ಮಾಡಿರುವುದಕ್ಕೆ ಸಂಬಂಧಪಟ್ಟ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡು ಶಿಕ್ಷಿಸಲು ದಯಮಾಡಿ ಒಂದು ವಿಚಾರಣಾ ಆಯೋಗವನ್ನು ರಚನೆ ಮಾಡಬೇಕು. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳಿರುವುದರಿಂದ ಈ ಕುರಿತು ಒಂದು ಹೇಳಿಕೆ ನೀಡಬೇಕು.

ಅಧ್ಯಕ್ಷರು : ರಿವ್ಯೂ ಮಾಡಿದವರು ಸ್ಟೇಟ್‌ಮೆಂಟ್ ಮಾಡುತ್ತಾರೆ. The Minister has replied. Please resume your seat.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ನಾವು ಇದರ ಬಗ್ಗೆ ರಿವ್ಯೂ ಮಾಡುತ್ತಿದ್ದೇವೆ. ನನ್ನ ವಿನಂತಿ ಏನೆಂದರೆ, ದಯಮಾಡಿ ನೀವುಗಳು ಜಿಲ್ಲಾ ಪಂಚಾಯತ್ ಸಭೆಯಲ್ಲಿ ಭಾಗವಹಿಸಿ ಎಲ್ಲೆಲ್ಲಿ ಲೋಪ-ದೋಷಗಳುಂಟಾಗಿವೆ ಎಂದು ಕಂಡುಹಿಡಿದು ನನ್ನ ಗಮನಕ್ಕೆ ತಂದರೆ ನಾನು ಆ ಕುರಿತು ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸದಸ್ಯರಾದ ಶಿವಾನಂದ ಪಾಟೀಲ್‌ರವರು ಈಗ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಭಾಗವಹಿಸಿ ಬಂದಿದ್ದಾರೆ. ವಿಚಾರವನ್ನು ಜಿಲ್ಲಾ ಪಂಚಾಯತ್ ಅಧಿಕಾರಿಗಳಿಂದ ನಡೆಸಿದರೆ ಆಗುವುದಿಲ್ಲ. ನಿಮ್ಮ ಕಡೆಯಿಂದ ವಿಚಾರಣೆ ಆಗಬೇಕು, ಈ ಸದನ ಸಮಿತಿ ರಚಿಸುವ ಮೂಲಕ ವಿಚಾರಣೆಯಾಗಬೇಕು, ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡಬೇಕು. ಕುಡಿಯುವ ನೀರಿನ ಯೋಜನೆಯಲ್ಲಿ ಕಳಪೆ ಕಾಮಗಾರಿಗಳಾಗಿವೆ. ನೆದರ್‌ಲ್ಯಾಂಡ್ ದೇಶದ ಅಧಿಕಾರಿಗಳಿಗೆ ತೋರಿಸುವ ಸಲುವಾಗಿ ಕೆಲವೊಂದು ಕೆಲಸ ಮಾಡಿದ್ದಾರಷ್ಟೆ. ಇದು ಬಹಳ ಗಂಭೀರವಾದಂಥ ವಿಷಯವಾಗಿದೆ.

ಅಧ್ಯಕ್ಷರು : ಮಾನ್ಯ ಘೋರ್ಪಡೆಯವರೆ, ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸುತ್ತೇವೆಂದು ಹೇಳಿ.

ಶ್ರೀ ಉಮೇಶ್ ವಿ. ಕತ್ತಿ : ನೆದರ್‌ಲ್ಯಾಂಡ್ ನೆರವಿನ ಕುಡಿಯವ ನೀರಿನ ಯೋಜನೆಯನ್ನು ರಾಜ್ಯದಲ್ಲಿ ಎಲ್ಲೆಲ್ಲಿ ಹಮ್ಮಿಕೊಳ್ಳಲಾಗಿದೆಯೋ ಅಲ್ಲೆಲ್ಲಾ ಸಂಪೂರ್ಣವಾಗಿ ಅನುಷ್ಠಾನಗೊಂಡಿದೆಯೆಂದು ಮಾನ್ಯ ಮಂತ್ರಿಗಳು ಭೇಟಿಯಿತ್ತು ಪರಿಶೀಲಿಸಿ ನಂತರ ಅವರಿಗೆ ಸಮಾಧಾನವಾದರೆ ನಮಗಷ್ಟೇ ಸಾಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇದನ್ನು ಚೀಫ್ ಇಂಜಿನಿಯರ್‌ರವರೇ ಮಾಡಿರುವುದರಿಂದ ಅವರೇ ಹೋಗಿ ತನಿಖೆ ಮಾಡುವುದರಿಂದ ಏನು ಸಿಗುತ್ತದೆ ? ಇದಕ್ಕೆ ಸದನ ಸಮಿತಿ ರಚನೆ ಮಾಡಬೇಕು.

(ಗೊಂದಲ)

ಅಧ್ಯಕ್ಷರು : ಸಮಗ್ರವಾಗಿ ತನಿಖೆ ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲ. What reply do you want? I can't compel the minister to reply like this ವಿಷಯ ಬಹಳ ಗಂಭೀರವಾಗಿದ್ದು, ಇದರ ಬಗ್ಗೆ ಸಮಗ್ರ ತನಿಖೆ ನಡೆಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿರುವುದರಿಂದ ಇನ್ನೇನು ಬೇಕು ?

ಶ್ರೀ ಜಗದೀಶ್ ಶೆಟ್ಟರ್ : ಅಧ್ಯಕ್ಷರೆ, ನೀವು ಹೇಳುತ್ತಿದ್ದೀರಿ, ಆದರೆ, ಮಾನ್ಯ ಮಂತ್ರಿಗಳು ಹೇಳುತ್ತಿಲ್ಲ.

ಅಧ್ಯಕ್ಷರು : ಅವರೇ ಹೇಳಿದ್ದಾರೆ, ಅವರು ಹೇಳಿರುವುದು ಕಲಾಪದ ನಡವಳಿಕೆಯಲ್ಲಿದೆ.

ಶ್ರೀ ಜಗದೀಶ್ ಶೆಟ್ಟರ್ : ಎಲ್ಲೆಲ್ಲಿ ಏನೇನು ಲೋಪ-ದೋಷಗಳುಂಟಾಗಿವೆ ಎಂಬ ಬಗ್ಗೆ ಜಿಲ್ಲಾ ಪಂಚಾಯತ್‌ನ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳುತ್ತೇನೆಂದು ಅವರು ಹೇಳುತ್ತಿದ್ದಾರೆಯೇ ವಿನಃ ನಮ್ಮ ಕಡೆಯಿಂದ ಎನ್‌ಕ್ವೈರಿ ಮಾಡಿಸುತ್ತೇನೆಂದು ಅವರು ಹೇಳುತ್ತಿಲ್ಲ.

SRI M.Y. GHORPADE : I have to get a report from the Chief Engineer. ಆ ರಿಪೋರ್ಟ್ ಬೇಕಾದರೆ ಸದನದ ಮುಂದಿಡುವುದಕ್ಕೆ ನಾನು ತಯಾರಿದ್ದೇನೆ.

(ಗೊಂದಲ)

MR. SPEAKER : I cannot compel the minister to reply as you like.

ಶ್ರೀ ಅರಗ ಜ್ಞಾನೇಂದ್ರ : ವಿದೇಶದಿಂದ ತಂದಿರುವ ಹಣವನ್ನು ಈ ರೀತಿ ದುರುಪಯೋಗ ಮಾಡಿಕೊಂಡಿರುವುದು ನಮಗೆ ಗೌರವ ತರುತ್ತದೆಯೇ? ಇದರ ಬಗ್ಗೆ ವಿಚಾರಣೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಕೊಂಡು, ಕುಡಿಯುವ ನೀರಿಗಾಗಿ ರಾಜ್ಯದ ಅನೇಕ ಕಡೆಗಳಲ್ಲಿ ಹಾಹಾಕಾರ ಪಡುತ್ತಿರುವುದರಿಂದ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಬೇಕು.

ಅಧ್ಯಕ್ಷರು : ರಿಪೋರ್ಟ್ ತರಿಸಿಕೊಂಡು ಅದನ್ನು ಸದನದ ಮುಂದಿಡುತ್ತೇನೆಂದು ಹೇಳುತ್ತಿದ್ದಾರಲ್ಲ, ನಿಮಗೆ ಇನ್ನೇನು ಬೇಕು?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮಂತ್ರಿಗಳು ಅದರ ಬಗ್ಗೆ ಏನೂ ಹೇಳುತ್ತಿಲ್ಲ. ಜಿಲ್ಲಾ ಪರಿಷತ್‌ನ ಅಧಿಕಾರಿಗಳಿಂದ ವರದಿ ತರಿಸಿಕೊಳ್ಳುತ್ತೇನೆಂದು ಹೇಳುರುವುದರಿಂದ, ಕುಡಿಯುವ ನೀರಿನ ಯೋಜನೆ ಎಲ್ಲಾ ಕಡೆಗಳಲ್ಲೂ ಪೂರ್ಣಗೊಂಡಿದೆ ಎಂದು ಮತ್ತೆ ಅದೇ ವರದಿಯನ್ನು ಕೊಡುತ್ತಾರೆ. ಆದುದರಿಂದ, ಈ ಬಗ್ಗೆ ಸಮಗ್ರ ತನಿಖೆ ನಡೆಸುತ್ತೇವೆಂದಾಗಲೀ, ವಿಚಾರಣ ಆಯೋಗ ನೇಮಕ ಮಾಡುತ್ತೇವೆಂದಾಗಲೀ ಹೇಳದೆ ಮಾನ್ಯ ಸಚಿವರು ಜಿಲ್ಲಾ ಪರಿಷತ್ ಅಧಿಕಾರಿಗಳ ವರದಿಯನ್ನೇ ನಂಬುತ್ತಿದ್ದಾರೆ. ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದು ಮಾನ್ಯ ಅಧ್ಯಕ್ಷರಾದ ತಾವೇನು ಹೇಳುತ್ತಿದ್ದೀರಿ, ಇದಕ್ಕಾಗಿ ನಾನು ತಮಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಆದರೆ, ಈ ಮಾತು ಮಾನ್ಯ ಮಂತ್ರಿಗಳಿಂದ ಬರುತ್ತಿಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಇದೇ ರೀತಿ ಉತ್ತರ ಕೊಡಬೇಕೆಂದು ನಾನು ಅವರಿಗೆ ಹೇಳುವುದಕ್ಕಾಗುವುದಿಲ್ಲ. I can only suggest.

ಶ್ರೀ ಕೆ. ಶ್ರೀನಿವಾಸಗೌಡ : ನೆದರ್‌ಲ್ಯಾಂಡ್ ನೆರವಿನ ಕುಡಿಯುವ ನೀರಿನ ಯೋಜನೆ ರಾಜ್ಯದ 201 ಗ್ರಾಮಗಳಿಗೆ ಸಂಬಂಧಿಸಿದ್ದು, ವಿಚಾರ ಬಹಳ ಗಹನವಾದುದಾಗಿರುವುದರಿಂದ ಇದರ ಬಗ್ಗೆ ಜಿಲ್ಲಾ ಪರಿಷತ್‌ನ ಇಂಜಿನಿಯರ್ ಅವರಿಂದ ವರದಿ ತರಿಸಿಕೊಳ್ಳದೇ ಮಾನ್ಯ ಸಚಿವರೇ ಖುದ್ದಾಗಿ ಒಂದೊಂದು ಜಿಲ್ಲೆಯ 2-3 ಗ್ರಾಮಗಳಿಗೆ ಭೇಟಿ ಕೊಟ್ಟು ರ್ಯಾಂಡಮ್ ಆಗಿ ವಿಚಾರಣೆ ನಡೆಸಿ ವರದಿ ತರಲಿ. ಇಲ್ಲದಿದ್ದರೆ, ವಿಚಾರವನ್ನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ಒಪ್ಪಿಸಬೇಕು.

ಶ್ರೀ ಎಂ.ವೈ. ಘೋರ್ಪಡೆ : ನಾನೇ ಸ್ವತಃ ಬಂದು ಪರಿಶೀಲಿಸಬೇಕೆಂದರೆ ಅಗತ್ಯವಾಗಿ ಬರುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಇದು ವಿದೇಶಿ ಸಾಲವಾಗಿದ್ದು, ಇದನ್ನು ದುರುಪಯೋಗ ಪಡಿಸಿಕೊಂಡಿರುವುದರಿಂದ ನಮ್ಮ ರಾಜ್ಯಕ್ಕೆ ಇದರಿಂದ ಗೌರವವುಂಟಾಗುವುದಿಲ್ಲವಾದ್ದರಿಂದ ತನಿಖೆ ಮಾಡಲು ಒಂದು ಸಮಿತಿಯನ್ನು ರಚನೆ ಮಾಡಬೇಕು.

ಶ್ರೀ ಎಂ.ವೈ. ಘೋರ್ಪಡೆ : ಇಲ್ಲಿ ಸದನ ಸಮಿತಿಯ ಪ್ರಶ್ನೆಯಲ್ಲ. ನೆದರ್‌ಲ್ಯಾಂಡ್ ನೆರವಿನ ಕುಡಿಯುವ ನೀರಿನ ಯೋಜನೆಯನ್ನು ರಾಜ್ಯದ ಸುಮಾರು 201 ಗ್ರಾಮಗಳಲ್ಲಿ ಹಮ್ಮಿಕೊಂಡಿದ್ದು ಯೋಜನೆಯ ಅನುಷ್ಠಾನಕ್ಕಾಗಿ 70 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು. ಯೋಜನೆ ಪೂರ್ಣಗೊಂಡಿರುತ್ತದೆ. ಮಾನ್ಯ ಸದಸ್ಯರು ಒಂದು ಗ್ರಾಮದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಕುಡಿಯುವ ನೀರಿನ ಯೋಜನೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿದ್ದು, ಈ ಕುರಿತು ಮಾನ್ಯ ಸದಸ್ಯರಾದ ಶ್ರೀ ಬಿ.ಆರ್. ಯಾವಗಲ್, ಶಿವಾನಂದ ಪಾಟೀಲ್ ಮತ್ತು ಬಿ.ಎಸ್. ಪಾಟೀಲ್(ಸಾಸನೂರು) ಒಳಗೊಂಡಂತೆ ಎಲ್ಲಾ ಸದಸ್ಯರೂ ಮಾತನಾಡುತ್ತಿರುವುದರಿಂದ ಒಂದೇ ಗ್ರಾಮಕ್ಕೆ ಸೀಮಿತವಾಗಿ ಏಕೆ ಹೇಳುತ್ತಿದ್ದೀರಿ?

ಅಧ್ಯಕ್ಷರು : ಕುಡಿಯುವ ನೀರಿನ ಯೋಜನೆ ಎಲ್ಲೆಲ್ಲಿ ಪೂರ್ಣವಾಗಿ ಅನುಷ್ಠಾನಗೊಂಡಿಲ್ಲವೋ ಅಂತಹ ಕಡೆಗಳಲ್ಲಿ ತಾವು ತನಿಖೆ ಮಾಡಿ.

ಶ್ರೀ ಎಂ.ವೈ. ಘೋರ್ಪಡೆ : ಚೀಫ್ ಇಂಜಿನಿಯರ್ ಅವರನ್ನು ಕಳುಹಿಸಿ ಪರಿಶೀಲಿಸುವುದು ಅನ್ಯಾಯವಾಗುವುದಾದರೆ ನಾನೇ ಸ್ವತಃ ಬಂದು ಪರಿಶೀಲಿಸುತ್ತೇನೆ. ಸರ್ಕಾರದಿಂದ ಹಮ್ಮಿಕೊಂಡ ಯೋಜನೆಗಳನ್ನು ಜನಪ್ರತಿನಿಧಿಗಳಾದ ನಾವು ಸತತವಾಗಿ ಗಮನಿಸುತ್ತಿರಬೇಕಾಗುತ್ತದೆ. ಬದಲಿಗೆ ಸದನ ಸಮಿತಿ ರಚಿಸಿ ಇದನ್ನು ಸರಿಪಡಿಸುವುದಿಲ್ಲ.

ಅಧ್ಯಕ್ಷರು : ಈಗಾಗಲೇ ಈ ಕುರಿತು ಸಾಕಷ್ಟು ಚರ್ಚೆಯಾಗಿದೆ. The Minister has agreed that he is going to enquire. We will take up next question.

ಶ್ರೀ ಜಗದೀಶ್ ಶೆಟ್ಟರ್ : ಇದು ಬಹಳ ಗಂಭೀರವಾದ ವಿಷಯವಾಗಿದ್ದು, ಸದರಿ ಯೋಜನೆಯ ಅನುಷ್ಠಾನಕ್ಕಾಗಿ ಸಾವಿರಾರು ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿರುವುದರಿಂದ ಇದರ ಬಗ್ಗೆ ತೋರಿಕೆಗಾಗಿ ಉತ್ತರ ಕೊಟ್ಟು ಮುಗಿಸುವಂತಾದಲ್ಲ. ಈ ಕುರಿತಾದ ಚರ್ಚೆಗೆ ಮಾನ್ಯ ಅಧ್ಯಕ್ಷರು ಕಾಲಾವಕಾಶವನ್ನು ನಿಗದಿಪಡಿಸಬಾರದು.

MR. SPEAKER : This is only question hour. Can we have discussion in question hour?

12.30 ಪಿಎಂ

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಎಲ್ಲಾ ಕ್ಷೇತ್ರದ ಶಾಸಕರು ಸಹ ಇದರ ಬಗ್ಗೆ ಹೇಳುತ್ತಿದ್ದಾರೆ.

ಅಧ್ಯಕ್ಷರು : ಹಾಗಿದ್ದರೆ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಕಳಿಸಿಕೊಡಿ. ನಾಳೆಯೇ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಪ್ರಶ್ನೋತರ ವೇಳೆಯಲ್ಲಿ ಈ ರೀತಿ ಚರ್ಚೆಗೆ ನಾನು ಅವಕಾಶ ಕೊಡುವುದಿಲ್ಲ. ಪ್ರಶ್ನೋತ್ತರ ವೇಳೆಯಲ್ಲಿ ಚರ್ಚೆಗೆ ಅವಕಾಶ ಕೊಡಲು ಆಗುವುದಿಲ್ಲ. ಪ್ರಶ್ನೋತ್ತರ ವೇಳೆ ಎಂದರೆ it is only to elicit information, not for discussion.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಹಲವಾರು ವರ್ಷಗಳಿಂದ ರಾಜ್ಯದಲ್ಲಿ ಕುಡಿಯುವ ನೀರಿಗೋಸ್ಕರ ರಾಜೀವ್‌ಗಾಂಧಿ ಟೆಕ್ನಲಾಜಿಕಲ್ ಮಿಷನ್, ವಿಶ್ವಬ್ಯಾಂಕ್, ನೆದರ್‌ಲ್ಯಾಂಡ್, ಡ್ಯಾನಿಡಾದಿಂದ ಸಾಲವನ್ನು ತೆಗೆದುಕೊಂಡಿರುವುದು ನಿಜ. ವಿಶೇಷವಾಗಿ ಉತ್ತರ ಕಾರ್ನಾಟಕದಲ್ಲಿ ಎಲ್ಲಿ ನೀರು ಸರಿಯಾಗಿ ಸಿಗುವುದಿಲ್ಲ, ಎರೆ ಮಣ್ಣು ಇರತಕ್ಕ ಪ್ರದೇಶಗಳಲ್ಲಿ ಹಲವಾರು ವರ್ಷಗಳಿಂದ ಸಾಲವನ್ನು ತೆಗೆದುಕೊಂಡು ಕಾರ್ಯಕ್ರಮವನ್ನು ಮಾಡುತ್ತಿರುವುದು ನಿಜ. ಈ ಹಿಂದೆ ನಾವು ಅಧಿಕಾರದಲ್ಲಿದ್ದಾಗ ನಾನು ಅನೇಕ ಸಂದರ್ಭಗಳಲ್ಲಿ ಇದರ ಬಗ್ಗೆ ರಿವ್ಯೂ ಮಾಡಿದಂಥ ಸಂದರ್ಭದಲ್ಲಿ, ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಯವರು ಈಗ ಏನಿದ್ದಾರೆ ಅವರೇ ನಮ್ಮ ಸರ್ಕಾರದಲ್ಲಿಯೂ ಸಹ ಇದ್ದರು; ಅವರನ್ನು ಇದರ ಬಗ್ಗೆ ಕೇಳಿ. ಈ ವಿಶ್ವಬ್ಯಾಂಕ್, ಡ್ಯಾನಿಡಾ, ನೆದರ್‌ಲ್ಯಾಂಡ್‌ನ ಸ್ಕೀಮ್‌ಗಳು ಏನಾಗಿದೆಯೆಂದರೆ, ಆಂಧ್ರಪ್ರದೇಶದಿಂದ ಕೆಲವು ಗುತ್ತಿಗೆದಾರರು ಬಂದಿದ್ದಾರೆ, ಅವರು ಇದರ ಗುತ್ತಿಗೆಯನ್ನು ತೆಗೆದುಕೊಂಡು, ಟೆಂಡರ್ ಓಪನ್ ಮಾಡಿದ್ದಾರೆ, ಟೆಂಡರ್ ತೆಗೆದುಕೊಂಡು there is a racket going on ಇದರಿಂದ ಈ ಕಾರ್ಯಕ್ರಮದಲ್ಲಿ ಬಹಳ ವಿಳಂಬವಾಗುತ್ತಿದೆ. ಕಳೆದ ಏಳೆಂಟು ವರ್ಷಗಳಿಂದ ವಿಳಂಬವಾಗುತ್ತಿದೆ. ಬೋರ್‌ವೆಲ್ ಹಾಕಿರುತ್ತಾರೆ ಆದರೆ ಅದು ಡ್ರೈಯಪ್ ಆಗಿಬಿಡುತ್ತದೆ, ಅನೇಕ ಕಡೆ ಪೈಪುಗಳನ್ನು ಹಾಕಿರುತ್ತಾರೆ ಆ ಪೈಪುಗಳೆಲ್ಲ ಹೊಡೆದು ಹೋಗಿಬಿಟ್ಟಿರುತ್ತವೆ; ಕೆಲವು ಸಲ ಪೈಪುಗಳನ್ನು ಕದ್ದುಕೊಂಡು ಹೋಗಿಬಿಟ್ಟಿರುತ್ತಾರೆ. ಈ ಮಧ್ಯೆ ಹಳ್ಳಿಯವರು ಕಾಂಟ್ರಿಬ್ಯೂಷನ್ ಕೊಡುವುದಿಲ್ಲ. ಇದು ವಾಸ್ತವವಾದ ಸಂಗತಿ. ನಾನು ಗಮನಿಸಿದಂತೆ ವಿಶೇಷವಾಗಿ ಧಾರವಾಡ ಜಿಲ್ಲೆ, ಬಿಜಾಪುರ ಜಿಲ್ಲೆಯಲ್ಲಿ ವಾಸ್ತವಿಕವಾಗಿ ಈ ತೊಂದರೆ ಆಗಿದೆ. ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ವಿಶೇಷವಾಗಿ ಈ ತೊಂದರೆ ಇದೆ. ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರ ಬಗ್ಗೆ ಈ ಸದನದಲ್ಲಿ ವಿಶ್ವಾಸವಿದೆ. ಇದಕ್ಕೆ ಅವರೇ ಕಾರಣಕರ್ತರು ಎಂದು ಯಾರೂ ಹೇಳುತ್ತಿಲ್ಲ. ಮಾನ್ಯ ಶಿವಾನಂದ ಪಾಟೀಲರು ಇದರ ಬಗ್ಗೆ ತಮ್ಮ ಕಾಳಜಿಯನ್ನು ಏಕೆ ವ್ಯಕ್ತ ಮಾಡಿದ್ದಾರೆಂದರೆ ಅನಾವಶ್ಯಕವಾಗಿ ಈ ಕಾರ್ಯಕ್ರಮ ವರ್ಷಗಟ್ಟಲೆ ವಿಳಂಬವಾಗುತ್ತಾ ಬಂದಿದೆ. ಮತ್ತೆ ಗ್ರಾಂಟ್ ಕೊಡುವುದು ಸಹ ನಿಂತುಹೋಗುವ ಸಂಭವವಿದೆ. ಆದರೆ ಪ್ರಾಜೆಕ್ಟ್‌ಗಳನ್ನು ಪೂರ್ಣ ಮಾಡಲು ಆಗುತ್ತಿಲ್ಲ. ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯವರಿಂದ ಇದರ ಬಗ್ಗೆ ವಿಚಾರಣೆ ಮಾಡಿಸಲು ಅವಕಾಶವಿದೆ ಇದು ಒಂದು ಭಾಗ. ಯಾವ ಮುಖ್ಯ ಇಂಜಿನಿಯರ್ ಮತ್ತು ಅಧಿಕಾರಿಗಳ ಮೇಲೆ ಆಪಾದನೆ ಇದೆ ಅವರಿಂದಲೇ ಇದರ ಬಗ್ಗೆ ವಿಚಾರಣೆ ಮಾಡಿಸಿ ವರದಿ

ತರಿಸುತ್ತೇನೆಂದು ತಾವು ಹೇಳಿದರೆ ಅದರಿಂದ ಸರಿಯಾಗಿ ವರದಿ ಬರುವುದಿಲ್ಲ. ಆದ್ದರಿಂದ ಸದನದ ಸಮಿತಿಯನ್ನು ಮಾಡಿ ಈ ರೀತಿ ಆಗದಂತೆ ಸಲಹೆ ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಯಾವುದಾದರು ಒಂದು ರೀತಿಯಲ್ಲಿ ವಿಚಾರಣೆ ಮಾಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ. ಮತ್ತು ನೀರಾವರಿ ಯೋಜನೆಗಳು ಒಂದು ವರ್ಷದೊಳಗಾಗಿ ಪೂರ್ಣವಾಗುವಂತೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಶಿವಾನಂದ ಸಿದ್ದರಾಮಗೌಡ : ಮಾನ್ಯ ಅಧ್ಯಕ್ಷರೆ, ನನ್ನದು ಒಂದೇ ಒಂದು ವಿಚಾರ. ಮಾನ್ಯ ಸಿಂಧ್ಯರವರು ಹೇಳಿರುವ ವಿಚಾರದಲ್ಲಿ ನಮಗೆ ತೃಪ್ತಿ ಇದೆ. ಏಕೆಂದರೆ ಇವುಗಳು 1989ರಲ್ಲಿ ಮಂಜೂರಾಗಿದ್ದಂಥ ಯೋಜನೆ. ರಿವೈಸ್ಡ್ ಅಗ್ರಿಮೆಂಟ್ ನೆದರ್‌ಲ್ಯಾಂಡ್ ಮತ್ತು ಭಾರತದ ನಡುವೆ ಆಗಿದ್ದು 1993ರಲ್ಲಿ. 1993ರಿಂದ ಇಲ್ಲಿಯವರೆಗೆ ಈ ಯೋಜನೆಗಳು ಡ್ರ್ಯಾಗಾನ್ ಆಗುತ್ತಾ ಬರುತ್ತಿದೆ. ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, ತಾವು ಮುಖ್ಯಮಂತ್ರಿಗಳಾದ ಮೇಲೆ ಮೊನ್ನೆ ತಾನೆ ಇದೇ ಯೋಜನೆಯನ್ನು ನನ್ನ ಗಮನಕ್ಕೆ ಬಾರದಂತೆ ತಮ್ಮ ಕೈಯಲ್ಲಿ ಉದ್ಘಾಟನೆ ಮಾಡಿಸಿದರು. ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕನಿಷ್ಟ ಎರಡು ಗಂಟೆಗಳ ಕಾಲ ನೀರನ್ನು ಪಂಪ್ ಮಾಡಲು ಆಗುವುದಿಲ್ಲ. ಒಂದು ಕೋಟಿ 10 ಲಕ್ಷ ರೂಪಾಯಿಗಳ ಯೋಜನೆಗೆ ಗುತ್ತಿಗೆದಾರರಿಗೆ 2 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರೂ ಸಹ ಆಂಧ್ರದ ಗುತ್ತಿಗೆದಾರರು. ಒಂದು ಕೋಟಿಗೆ ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಆದ್ದರಿಂದ ಕೊನೆಯ ಪಕ್ಷ ಎಕ್ಸ್‌ಪ್ರೆಸ್ ವಿದ್ಯುತ್ ಲೈನನ್ನು ಕೆ.ಇ.ಬಿ. ಯಿಂದ ಹಾಕಿಸಿ ಎಂದು ಸಬ್‌ಮಿಷನ್ ಮಾಡಿದ್ದೆ. ವಿದ್ಯುತ್ ಸಮಸ್ಯೆ ಒಂದು ವಿಚಾರ. ಇಲ್ಲದಿದ್ದರೆ ಜನರೇಟರನ್ನು ಇಟ್ಟು ವಿದ್ಯುತ್ ಸರಬರಾಜು ಮಾಡಿದರೆ. ಸಫಿಶಿಯೆಂಟ್ ಹವರ್ಸ್ ಪಂಪಿಂಗ್ ಆಗುತ್ತದೆ ಎಂದು ಪಿ.ಪಿ.ಎಂ.ನ ನಿರ್ದೇಶಕರಿಗೆ ಮತ್ತು ಆರ್.ಡಿ.ಪಿ.ಆರ್.ನ ಕಾರ್ಯದರ್ಶಿಯವರಿಗೆ ಇದುವರೆಗೆ ಮೂರು ಪತ್ರಗಳನ್ನು ಬರೆದಿದ್ದೇನೆ. ಆದರೆ ಇದುವರೆಗೆ ಯಾವುದೇ ಉತ್ತರವೂ ಇಲ್ಲ. ಮತ್ತೊಂದು ವಿಚಾರವೇನೆಂದರೆ ಇದರಲ್ಲಿ ಯಾವ ಯೋಜನೆಗಳೂ ಸಹ ಪೂರ್ಣಗೊಂಡಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ಇದಕ್ಕಾಗಿ 63 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಆದರೆ ಒಂದು ಯೋಜನೆಗಳು ಪೂರ್ಣವಾಗಿಲ್ಲ. ಆದರೆ ತಮ್ಮ ವರದಿಯಲ್ಲಿ ಮಾತ್ರ ಎಲ್ಲಾ ಯೋಜನೆಗಳು ಪೂರ್ಣಗೊಂಡಿವೆ. ತಮ್ಮಷ್ಟೇ ಕಾಳಜಿ ನಮಗೂ ಇದೆ, ನಮಗಿಂತ ತಮಗೇ ಹೆಚ್ಚು ಕಾಳಜಿಯನ್ನು ತಾವು ತೆಗೆದುಕೊಂಡರೆ ನಾವು ಸ್ವಾಗತಿಸುತ್ತೇವೆ.

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರ್) : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಬಹಳಷ್ಟು ಯೋಜನೆಗಳನ್ನು ನೆದರ್‌ಲ್ಯಾಂಡ್ ಸ್ಕೀಮ್‌ನಿಂದ ತೆಗೆದುಕೊಂಡಿದ್ದಾರೆ. ಮಾನ್ಯ ಸಚಿವರು ಇದರ ಬಗ್ಗೆ ವಿಚಾರಣೆ ನಡೆಸುವುದಾಗಿ ಹೇಳಿದ್ದಾರೆ, ಅದನ್ನು ಮಾಡಲಿ. ಆದರೆ ಪ್ರತಿಯೊಂದು ಯೋಜನೆಗಳು ಕೇವಲ ಕಾಗದದಲ್ಲಿ ರೂಪಿತವಾಗಿದೆಯೇ ಹೊರತು ಕಾರ್ಯರೂಪದಲ್ಲಿ ಯಾವುದೂ ಬಂದಿಲ್ಲ. ಅಲ್ಲಿನ ಜಿಲ್ಲಾಪಂಚಾಯಿತಿ ಸಭೆಗೆ ಆಂಧ್ರದಿಂದ ಈ ಯೋಜನೆಗೆ ವ್ಯವಸ್ಥೆ ಮಾಡುವ ಒಬ್ಬರು ಗುತ್ತಿಗೆದಾರರು ಬಂದಿದ್ದರು. ಈ ಯೋಜನೆ ಏಕೆ ವಿಳಂಬವಾಗುತ್ತಿದೆ, ನಿನ್ನ ಕೆಲಸವೇನು

ಎಂದು ಅವರನ್ನು ನಾನೇ ಕೇಳಿದೆ. ಆಗ ಅವರು ``My duty is only to take the horse to water-tank, not to make it drink" ಈ ರೀತಿ ಅಸಭ್ಯವಾದ ಉತ್ತರವನ್ನು ಕೊಟ್ಟರು. ಬಹುತೇಕ ನೆದರ್‌ಲ್ಯಾಂಡ್ ಸ್ಕೀಮ್‌ನ ಯೋಜನೆಗಳನ್ನು ನನ್ನ ಜಿಲ್ಲೆ ಮತ್ತು ನನ್ನ ಮತ ಕ್ಷೇತ್ರದಲ್ಲಿ ಕೇವಲ ಕಾಗದದಲ್ಲಿ ಮಾತ್ರ ಪೂರ್ತಿಯಾಗಿದೆ, ಯಾವುದೂ ಕಾರ್ಯರೂಪಕ್ಕೆ ಬಂದಿಲ್ಲ. ಆದ್ದರಿಂದ ಮಾನ್ಯ ಸಚಿವರು ಕಾಗದದ ಮೇಲೆ ಏನು ಮಾಹಿತಿ ನೀಡಿದ್ದಾರೆ ಅದನ್ನೇ ನಂಬಿಕೊಳ್ಳಬೇಡಿ, ಬಹಳಷ್ಟು ಯೋಜನೆಗಳು ಅಪೂರ್ಣವಾಗಿದೆ, ಬಹಳಷ್ಟು ಯೋಜನೆಗಳಲ್ಲಿ ಹಣದ ದುರುಪಯೋಗವಾಗಿದೆ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಸುಮಾರು 26 ಹಳ್ಳಿಗಳಿಗೆ ನನ್ನ ಮತಕ್ಷೇತ್ರದಲ್ಲಿ ಈ ಸ್ಕೀಮ್‌ನ ಯೋಜನೆ ಬಂದಿದೆ. ದುರ್ದೈವಕ್ಕೆ ಇದು ಬಹಳಷ್ಟು ಇನಾರ್ಡಿನೇಟ್ ಡಿಲೇ ಆಗಿಕೊಂಡು ಬಂದಿದೆ. ಕಾಲಕಾಲಕ್ಕೆ ಇದನ್ನು ಮುಂದುವರೆಸಿಕೊಂಡು ಬಂದರು. ನೆದರ್‌ಲ್ಯಾಂಡ್‌ನವರು ಕೊಟ್ಟಂಥ ಹಣ ಸಾಕಾಗುವುದಿಲ್ಲವೆಂದು ರಾಜ್ಯದ ಆಯುವ್ಯಯದಿಂದಲೂ ಸಹ ಹಣವನ್ನು ಒದಗಿಸಿದರು. ದುರ್ದೈವದಿಂದ ಆಗಲೂ ಆ ಕೆಲಸವಾಗಲಿಲ್ಲ. ಒಂದು ಯೋಜನೆಯಲ್ಲಿ ಕೆಲಸಗಳು ಪೂರ್ಣವಾಗುವುದರಲ್ಲಿ ಇತ್ತು, ಆದರೆ ಅಷ್ಟರಲ್ಲಿ ಕೊರೆದಂಥ ಭಾವಿಗಳು ಕೊಲ್ಯಾಪ್ಸ್ ಆದವು, ಇದನ್ನು ಪೂರ್ಣ ಮಾಡಿ ಕೆಲಸವನ್ನು ಮುಗಿಸಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ವಿನಂತಿಸುವೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ನಾನು ಎಲ್ಲರ ಮಾತುಗಳನ್ನು ಬಹಳ ಲಕ್ಷ್ಯಕೊಟ್ಟು ಕೇಳಿದ್ದೇನೆ. ನಾನೂ ಇದರ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ, ತಾವುಗಳೆಲ್ಲರೂ ಗಮನಕೊಡಬೇಕು. ಇಲ್ಲಿ ನಮ್ಮ ಮುಂದಿರುವ ಪ್ರಶ್ನೆ ಬಬಲೇಶ್ವರ ಗ್ರಾಮಕ್ಕೆ ಸಂಬಂಧಪಟ್ಟಿದ್ದುದು. ನನ್ನ ಮುಂದಿರುವ ವರದಿಯ ಪ್ರಕಾರ ಕೆಲಸ ಪೂರ್ತಿಯಾಗಿದೆ, ನೀರು ತೆಗೆಯುತ್ತಿದ್ದಾರೆ, ಸಾಕಷ್ಟು ನೀರು ಇದೆ, ಗುಣಮಟ್ಟದಲ್ಲಿ ದೋಷವಿಲ್ಲ. ಇದು ಸರಿಯಿಲ್ಲವೆಂದು ತಾವು ಹೇಳುವುದಿದ್ದರೆ ಇದರ ಬಗ್ಗೆ ಮುಖ್ಯ ಇಂಜಿನಿಯರ್‌ರವರನ್ನು ಕಳಿಸಿ ವರದಿಯನ್ನು ತರಿಸುತ್ತೇನೆಂದು ಹೇಳಿದೆ. ಆ ಮುಖ್ಯ ಇಂಜಿನಿಯರ್ ಮೇಲೆ ನಂಬಿಕೆ ಇಲ್ಲ, ನೀವೇ ಬರಬೇಕು ಎಂದರೆ ಅದಕ್ಕೂ ನಾನು ತಯಾರಿದ್ದೇನೆ. ಈ ಪ್ರಶ್ನೆಗೆ ಸಂಬಂಧಪಟ್ಟ ವಿಚಾರ ಇದು ಮಾತ್ರ ಆಗಿದೆ. ಇದರ ಜೊತೆಗೆ ತಾವು ಈ ವಿಚಾರವನ್ನು ಎನ್‌ಲಾರ್ಜ್ ಮಾಡಲು ಹೋಗಿ ವಿಶ್ವಬ್ಯಾಂಕ್ ಬಗ್ಗೆ, ನೆದರ್‌ಲ್ಯಾಂಡ್ಸ್ ಯೋಜನೆಗಳ ಬಗ್ಗೆ ಹಲವಾರು ಮಾತುಗಳನ್ನು ಹೇಳಿದ್ದೀರಿ. ಎಕ್ಸಟರ್‌ನಲಿ ಏಡೆಡ್ ಪ್ರಾಜೆಕ್ಟ್‌ಗಳು ಆದ ತಕ್ಷಣ ಅದರಲ್ಲಿ ದೋಷರಹಿತವಾಗಿ ಯಾವುದರಲ್ಲೂ ಇರಲು ಸಾಧ್ಯವಿಲ್ಲವೆಂದು ನಮಗೂ ಗೊತ್ತಿದೆ. ವಿಶ್ವಬ್ಯಾಂಕ್‌ನ ಫೇಸ್ ಒಂದರ ಯೋಜನೆಗಳೇನಿದೆ ಅದರಲ್ಲಿ ನಾವು ದೋಷಗಳನ್ನೇನು ಕಂಡುಹಿಡಿದಿದ್ದೇವೆ ಅದನ್ನು ಗ್ರಹಿಸಿ ತಪ್ಪನ್ನು ಸರಿಪಡಿಸಲು ಎರಡನೇ ಫೇಸ್‌ನ ಯೋಜನೆಗಳಲ್ಲಿ ಪ್ರಯತ್ನ ಪಡುತ್ತಿದ್ದೇವೆ. ಮೊದಲ ಫೇಸ್‌ನ ಕೆಲಸ ಆಗುತ್ತಿರುವಾಗ ತಮ್ಮ ಸರ್ಕಾರವೇ ಅಧಿಕಾರದಲ್ಲಿ ಇತ್ತು. ಆಗ ವಿಶ್ವಬ್ಯಾಂಕ್‌ನವರು ದೊಡ್ಡ ದೊಡ್ಡ ಗುತ್ತಿಗೆದಾರರ ಮೇಲೆ ನಂಬಿಕೆಯನ್ನಿಟ್ಟು ದೆಹಲಿಯಿಂದ, ಬೇರೆ ಬೇರೆ ಕಡೆಯಿಂದ ಗುತ್ತಿಗೆದಾರರು ಬಂದು, ಆ ಕಾಲದಲ್ಲಿ ಹಣವನ್ನು ಸಹ ಸಾಕಷ್ಟು ಇಟ್ಟಿದ್ದರು. ಅಷ್ಟೊಂದು ಮಾರ್ಜಿನ್ ಹಣವನ್ನು

ಇಡಲು ಕಾರಣವೇನು ಎಂದು ನನಗೇ ಆಶ್ಚರ್ಯವಾಗುತ್ತದೆ. ತಮಗೆ ಗೊತ್ತಿರಬಹುದು. ನನ್ನ ಮಾಹಿತಿಯ ಪ್ರಕಾರ Margin 75 ಪರ್‌ಸೆಂಟ್ above the ಕಾಸ್ಟ್ ಇಟ್ಟಿದ್ದರು. ಅದನ್ನು ಅವರು ಸುಖವಾಗಿ ಸಬ್ ಕಂಟ್ರಾಕ್ಟರ್ಸ್‌ಗೆ ಕೊಟ್ಟರು. ನಾನು ವಿಶ್ವಬ್ಯಾಂಕ್‌ನ ಮೊದಲ ಫೇಸ್ ಕಾರ್ಯಕ್ರಮದ ಬಗ್ಗೆ ಹೇಳುತ್ತಿದ್ದೇನೆ. ಇದರ ಬಗ್ಗೆ ಸೂಪರ್‌ವಿಜನ್ ಮಾಡುವುದಕ್ಕೆ ಆಗುತ್ತಿರಲಿಲ್ಲ. ಈ ರೀತಿ ನೂರಾರು ದೋಷಗಳು ಇರಬಹುದು. ಇದರ ಬಗ್ಗೆ ಅರ್ಧಗಂಟೆ ಚರ್ಚೆ ಮಾಡಲು ತಾವು ಇಷ್ಟಪಡುವುದಾದರೆ ನಾನು ಇವೆಲ್ಲದರ ಬಗ್ಗೆ ಹೇಳಲು ತಯಾರಾಗಿದ್ದೇನೆ. ಆದರೆ ವಿಶ್ವಬ್ಯಾಂಕಿನಿಂದ ನಾವು 900 ಕೋಟಿ ರೂಪಾಯಿಗಳಿಗೆ ಒಂದು ಕಾರ್ಯಕ್ರಮ ಮಾಡಲಿಕ್ಕೆ ಹೊರಟಿದ್ದೇವೆ. ಅದರಲ್ಲಿ 600 ಕೋಟಿ ರೂಪಾಯಿಗಳನ್ನು ಅವರು ಕೊಡಬೇಕು. ಸಾಧ್ಯವಾದರೆ 2 ಸಾವಿರ ಕೋಟಿ ರೂಪಾಯಿಗಳ ಕಾರ್ಯಕ್ರಮ ಮಾಡಲಿಕ್ಕೆ ನಾವು ಹೊರಟಿದ್ದೇವೆ. ಆದಕಾರಣ ಅದರಲ್ಲಿ ಏನಾದರೂ ದೋಷಗಳು ಇದ್ದರೆ ನಾವು ನಾವೇ ಅದನ್ನು ಸರಿಪಡಿಸಿಕೊಳ್ಳಬೇಕು. ರಾಜಕೀಯಕ್ಕಾಗಿ ಅದರ ಬಗ್ಗೆ ದೊಡ್ಡದಾಗಿ ಉಪಯೋಗಿಸಬಾರದು ಎಂದು ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಾಟೀಲ ಶಿವಾನಂದ ಸಿದ್ಧರಾಮಗೌಡ : ಈ ವಿಷಯವಾಗಿ ರಾಜಕೀಯವಾಗಿ ಮಾತನಾಡಬೇಕೆಂದರೆ ನಾವು ಅದನ್ನೇ ಮಾತನಾಡುತ್ತೇವೆ. ಈ ಬಗ್ಗೆ ಇಲ್ಲಿ ರಾಜಕೀಯವಾಗಿ ಯಾರು ಮಾತನಾಡಿಲ್ಲ. ನೀವು ಇದನ್ನು ಕ್ರೀಡಾ ಮನೋಭಾವನೆಯಿಂದ ತೆಗೆದುಕೊಳ್ಳಿ.

ಶ್ರೀ ಎಂ.ವೈ. ಘೋರ್ಪಡೆ : ನಾವು ಮಾಡಿದ ಬದಲಾವಣೆಗಳ ಬಗ್ಗೆ ನಾನು ಒಂದು ಹೇಳುತ್ತೇನೆ. ಹಿಂದೆ ಏನು ತಪ್ಪಾಯಿತು,

ಶ್ರೀ ಪಾಟೀಲ ಶಿವಾನಂದ ಸಿದ್ಧರಾಮ : ರಾಜಕೀಯವಾಗಿ ಇದನ್ನು ಯಾರು ಮಾತನಾಡಿಲ್ಲ. ದಯಮಾಡಿ ನೀವು ಅದನ್ನು ಆಪಾದನೆ ಮಾಡಬೇಡಿ;

ಶ್ರೀ ಎಂ.ವೈ. ಘೋರ್ಪಡೆ : ರಾಜಕೀಯವಾಗಿ ಇದನ್ನು ಉಪಯೋಗಿಸಬಾರದು ಎಂದು ನಾನು ಹೇಳಿದೆ. ವಿಶ್ವಬ್ಯಾಂಕಿನಿಂದ ನಾವು ಇನ್ನೂ ಹೆಚ್ಚಿನ ಮೊತ್ತದಲ್ಲಿ ಸಹಾಯ ತೆಗೆದುಕೊಳ್ಳಬೇಕಾಗಿದೆ, ಅದನ್ನು ಸರಿಯಾಗಿ ಉಪಯೋಗ ಮಾಡಬೇಕಾಗಿದೆ. ಹಿಂದೆ ಏನು ದೋಷಗಳು ನಡೆದವೋ ಅದನ್ನು ಗಮನಿಸಿ ನಾವು ನಮ್ಮ ವಿಧಾನ ಬಹಳಷ್ಟು ಬದಲಾವಣೆ ಮಾಡಿದ್ದೇವೆ. ಇದು ಸದನಕ್ಕೆ ಗೊತ್ತಿಲ್ಲ. ದೊಡ್ಡ ದೊಡ್ಡ ಕಾಂಟ್ರಾಕ್ಟ್ಸ್ ಕೊಡಬಾರದು. ಒಂದು ಕೋಟಿ ರೂಪಾಯಿಗಳ ಕಾಂಟ್ರಾಕ್ಟ್ ಕೊಟ್ಟು ನಾಲ್ಕು ಹಳ್ಳಿಯ ಕೆಲಸ ವಹಿಸಬಾರದು. ವಿಶ್ವಬ್ಯಾಂಕಿನ ಜೊತೆಗೆ ಚರ್ಚೆ ಮಾಡಿದಂತೆ, ವಿಲೇಜ್ ಅನ್ನು ಒಂದು ಸೆಂಟರ್ ಅನ್ನಾಗಿ ಮಾಡಿಕೊಂಡು ವಿಲೇಜ್‌ವೈಸ್, ಗ್ರಾಮ ಪಂಚಾಯಿತಿವೈಸ್ ಸ್ಕೀಮ್‌ಗಳನ್ನು ಮಾಡಬೇಕು. ದೊಡ್ಡ ದೊಡ್ಡ ಸ್ಕೀಮ್‌ಗಳನ್ನು ಮಾಡುವುದಲ್ಲ. ಗ್ರಾಮ ಪಂಚಾಯಿತಿ ವೈಸ್ ಸ್ಕೀಮ್ ಮಾಡಿ ಅವರನ್ನು ಸಂಪೂರ್ಣವಾಗಿ ನಾವು ಈ ಸ್ಕೀಮಿನ ಅನುಷ್ಠಾನದಲ್ಲಿ ತೊಡಗಿಸಿಕೊಳ್ಳಬೇಕು. ನಮ್ಮಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳೆಂಬ ಮೂರು ಹಂತದ ವ್ಯವಸ್ಥೆ ಇದೆ. ಇವತ್ತು ಈ ವ್ಯವಸ್ಥೆಯನ್ನು ನಾವು ಜಿಲ್ಲಾ

ಪಂಚಾಯಿತಿಗೆ ವಹಿಸಿದ್ದೇವೆ. ಸರ್ಕಾರಕ್ಕೆ ಇದನ್ನು ವಹಿಸಲಾಗಿಲ್ಲ. ಜಿಲ್ಲಾ ಪಂಚಾಯಿತಿ ಅಲ್ಲೇ ಇರುತ್ತದೆ. ನಾವು ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೂ ಈ ಮಾತನ್ನು ತಿಳಿಸಿದ್ದೇವೆ. ಪ್ರತಿಯೊಂದು ಸಲವೂ ಮೀಟಿಂಗ್ ಆದಾಗ ಇದನ್ನು ಮೊದಲು ನೀವು ರಿವ್ಯೂ ಮಾಡಿ ಎಂದು ಹೇಳಿದ್ದೇವೆ. ಎಲ್ಲೆಲ್ಲಿ ದೋಷ ಇದೆ ಅಲ್ಲಿಗೆ ನಿಮ್ಮ ಸ್ಟಾಫ್ ಅನ್ನು ಕಳುಹಿಸಿ ನಿಮ್ಮಿಂದ ಅದನ್ನು ಸರಿಪಡಿಸಲಿಕ್ಕೆ ಆಗಲಿಲ್ಲ ಎಂದರೆ ನಮಗೆ ತಿಳಿಸಿ ಎಂದು ಹೇಳಿದ್ದೇವೆ. ವರ್ಲ್ಡ್ ಬ್ಯಾಂಕ್ ಸ್ಕೀಮ್‌ನಲ್ಲಿ ದೋಷ ಇದ್ದರೂ ಕೂಡ ನಾವು ಅವರ ಗಮನಕ್ಕೆ ತರಲಿಕ್ಕೆ ನಮಗೆ ಅವಕಾಶ ಇದೆ. ವರ್ಲ್ಡ್ ಬ್ಯಾಂಕ್ ಸ್ಕೀಮ್ ಅನ್ನು ನೋಡಲಿಕ್ಕೆ ನಮ್ಮಲ್ಲಿ ಅಧಿಕಾರಸ್ಥರು ಇದ್ದಾರೆ. ಆದನ್ನೂ ಮಾಡುತ್ತೇವೆ. ಒಟ್ಟಿನಲ್ಲಿ ವರ್ಲ್ಡ್ ಬ್ಯಾಂಕ್ ಆಗಲೀ ಅಥವಾ ನಮ್ಮ ಕಾರ್ಯಕ್ರಮ ಆಗಲೀ ಅದರಲ್ಲಿ ದೋಷ ಇರುತ್ತದೆ. ಎಲ್ಲಿಯವರೆಗೆ ನೀವು ಅದರ ಕಡೆ ಸಾಕಷ್ಟು ಸೂಪರ್ ವಿಷನ್ ಮಾಡುವುದಿಲ್ಲವೋ ಅಲ್ಲಿಯವರೆಗೂ ದೋಷ ಇರುತ್ತದೆ. ಇದನ್ನು ಸರಿಪಡಿಸಬೇಕಾದರೆ ಸೂಪರ್‌ವಿಷನ್ ಸರಿಯಾಗಿರಬೇಕು, ರಿವ್ಯೂ ಸರಿಯಾಗಿರಬೇಕು. ಇಂತಹ ಸಮಸ್ಯೆಗಳು ಬಂದಾಗ ಚೀಫ್ ಇಂಜಿನಿಯರ್ ಅವರನ್ನು ನಾನು ಕಳುಹಿಸುತ್ತೇನೆ ಎಂದರೂ ಕೂಡ ನಿಮಗೆ ಸಮಾಧಾನವಾಗದಿದ್ದರೆ ನಾವೇನು ಮಾಡಲಿಕ್ಕಾಗುತ್ತದೆ? ನನಗಿಂತ ಚೀಫ್ ಇಂಜಿನಿಯರ್‌ರವರು ಟೆಕ್ನಿಕಲ್ಲಾಗಿ ಬುದ್ಧಿವಂತರಾಗಿರುತ್ತಾರೆ. ಅವರ ವರದಿ ಬಂದ ಕೂಡಲೇ ಅದನ್ನು ಬೇಕಾದರೆ ನಾನು ತಮಗೆ ಕೊಡುತ್ತೇನೆ. ಆಮೇಲೆ ಅದರ ಬಗ್ಗೆ ಏನಾದರೂ ಎನ್‌ಕ್ವೈರಿ ಮಾಡುವ ಅವಶ್ಯಕತೆ ಇದ್ದರೆ ಮಾಡೋಣ. ನಾನೇನೂ ಅದಕ್ಕೆ ಅಡ್ಡ ಬರುತ್ತಿಲ್ಲ. ನಾನೂ ಕೂಡ ನಿಮ್ಮ ಹಾಗೆಯೇ ಯಾರೇ ತಪ್ಪು ಮಾಡಲಿ, ಎನ್‌ಕ್ವೈರಿ ಮಾಡಬೇಕು ಎನ್ನುವಂತಹ ಅಭಿಪ್ರಾಯವುಳ್ಳವನಾಗಿದ್ದೇನೆ. ಅದನ್ನು ಮುಚ್ಚಿಡುವಂತಹ ಅಭಿಪ್ರಾಯ ನನ್ನದಲ್ಲ. ಸರ್ಕಾರಕ್ಕೂ ಕೂಡ ಅಂತಹ ಅಭಿಪ್ರಾಯವಿಲ್ಲ. ತಪ್ಪುಗಳು ನಡೆಯುತ್ತಿರುತ್ತವೆ. ಅದನ್ನು ಸರಿಪಡಿಸುವ ವಿಧಾನವೇನು ಎಂಬ ಬಗ್ಗೆ ತಾವು ಚರ್ಚೆ ಮಾಡುವುದಾದರೆ ನನ್ನದೇನೂ ಅಭ್ಯಂತರ ಇಲ್ಲ. ನಮಗೆ ವರ್ಲ್ಡ್ ಬ್ಯಾಂಕ್ ಫಸ್ಟ್ ಫೇಸ್‌ನಲ್ಲಿ ಏನಾಯಿತು? ಈಗ ನಾವು ಏನು ಮಾಡುತ್ತಿದ್ದೇವೆ ಇದನ್ನೆಲ್ಲಾ ಈಗಲೇ ಚರ್ಚೆ ಮಾಡುವುದು ಅಷ್ಟು ಸೂಕ್ತವಲ್ಲ. ವಿಶ್ವಬ್ಯಾಂಕ್‌ನ ಜೊತೆಗೆ ಇವತ್ತು ಚರ್ಚೆ ನಡೆಯುತ್ತಿದೆ. ಮೊದಲು ವರ್ಲ್ಡ್ ಬ್ಯಾಂಕ್ ದೊಡ್ಡ ದೊಡ್ಡ ಕಾಂಟ್ರಾಕ್ಟರ್ಸ್ ಪರವಾಗಿ ಒಂದು ವ್ಯವಸ್ಥೆಯನ್ನು ಮಾಡಿತು. ಅದು ಕನ್ಸಲ್‌ಟೆನ್ಸಿ ಮಾಡಬೇಕು ಎಂಬುದಾಗಿತ್ತು. ಆದರೆ, ಅದು ಅಷ್ಟೊಂದು ಯಶಸ್ವಿಯಾಗಲಿಲ್ಲ. ಈಗ ನಾವು ಸಣ್ಣ ಸ್ಕೀಮ್ಸ್ ಮಾಡಬೇಕು, ಲೋಕಲ್ ಕನ್ಸಲ್‌ಟೆನ್ಸಿ ಉಪಯೋಗಿಸಬೇಕು, ಜನಕ್ಕೆ ಸಂಪೂರ್ಣ ಅಧಿಕಾರ ಕೊಡಬೇಕು ಎಂಬ ಅಭಿಪ್ರಾಯ ವಿಶ್ವಬ್ಯಾಂಕಿಗೆ ಇದೆ. ಕೋಟಿಗಟ್ಟಲೆ ಹಣ ಗ್ರಾಮಸ್ಥರಿಗೇ ಕೊಡಬೇಕು ಎಂಬುದು ಅವರ ಅಭಿಪ್ರಾಯವಾಗಿದೆ. ಅವರಿಂದಲೇ ಕೆಲಸ ಮಾಡಿಸಬೇಕು, ನಾವು ಅವರಿಗೆ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಸಹಾಯ ಮಾಡುತ್ತೇವೆ ಎಂದು ನಾವು ಹೇಳುತ್ತಿದ್ದೇವೆ. ಈ ಮಟ್ಟದಲ್ಲಿ ಒಂದು ಚರ್ಚೆ ವರ್ಲ್ಡ್ ಬ್ಯಾಂಕ್ ಜೊತೆಗೆ ನಡೆಯುತ್ತಿದೆ. ಅವರಿಂದ 600 ಕೋಟಿ ರೂಪಾಯಿಗಳು ನಮಗೆ ಬರಬಹುದು, 2 ಸಾವಿರ ಕೋಟಿ ರೂಪಾಯಿಗಳು ಬರಬಹುದು. ಈ ದೋಷಗಳನ್ನು ಸರಿಪಡಿಸುವ ವಿಧಾನಗಳ ಬಗ್ಗೆ ಚರ್ಚೆ ಮಾಡುವುದರ ಬಗ್ಗೆ ನನ್ನದೇನೂ ಆಕ್ಷೇಪಣೆ ಇಲ್ಲ. ಇದರ ಹಿನ್ನೆಲೆಯನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅದಕ್ಕೆ

ಒಪ್ಪುವುದಾದರೆ ನಾನು ಅದರ ಬಗ್ಗೆ ಚರ್ಚೆಗೆ ಸಿದ್ಧನಾಗಿದ್ದೇನೆ. ನನಗೆ ಈ ವಿಷಯಗಳು ಗೊತ್ತಿಲ್ಲವೆಂದೇನೂ ಅಲ್ಲ. ನಾವು ಯಾರ ಮೇಲೂ ಆಪಾದನೆ ಮಾಡಬಾರದು ಅಂತಲ್ಲ. ಆದರೆ ನಮಗೆ ಈ ವಿಷಯಗಳು ಗೊತ್ತಿಲ್ಲವೆಂದು ನೀವು ಹೇಳುವುದಾದರೆ ಇದರ ಬಗ್ಗೆ ಚರ್ಚೆ ಮಾಡಿ. ನಿಮಗಿಂತ ಕೆಲವು ವಿಷಯಗಳು ನಮಗೆ ಹೆಚ್ಚಿಗೆ ಗೊತ್ತಿರಬಹುದು, ಕಡಿಮೆ ಅಂತೂ ಗೊತ್ತಿರಲಿಕ್ಕೆ ಸಾಧ್ಯವಿಲ್ಲ. ನಾನು ಇವತ್ತು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮಾಡುವುದಕ್ಕೆ 40 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದೆ. ಪ್ರತಿಯೊಂದು ಗ್ರಾಮ ಪಂಚಾಯಿತಿಗೂ ಕೂಡ ನೀವು ಹೋಗದೇ, ನೀವೊಂದು ಪರಿಣಾಮಕಾರಿಯಾಗಿ ಕಾರ್ಯಕ್ರಮ ಮಾಡಲಿಕ್ಕೆ ಆಗುವುದಿಲ್ಲ. ಆದಕಾರಣ ಪಕ್ಷಾತೀತವಾಗಿ ಎಲ್ಲರೂ ಒಂದಾಗಿ ಈ ಕುಡಿಯುವ ನೀರಿನ ಕಾರ್ಯಕ್ರಮವನ್ನಾದರೂ ಕೂಡ ನೋಡದೇ ಹೋದರೆ, ಹಿಂದೆ ಆಗಿದ್ದು ಗೊಂದಲಗಳನ್ನೂ ಕೂಡ ನಮಗೆ ಸರಿಪಡಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆ ಕಾಲಕ್ಕೆ ನಡೆದಿದ್ದು ಎಂದು ನಾನು ಹೇಳಿಕೆ ಕೊಟ್ಟೆ ಅಷ್ಟೆ. ಅದನ್ನೇ ನಾನು ಆಕ್ಟೀವ್ ಆಗಿ ಬೆಳೆಸಲಿಕ್ಕೆ ಕೂಡ ಇಷ್ಟಪಡುವುದಿಲ್ಲ. ಹಿಂದೆ ಆದಂತಹ ತಪ್ಪನ್ನು ಯಾವ ರೀತಿ ಸರಿಪಡಿಸಬೇಕು. ತಾವು ಸಹಕಾರ ಕೊಟ್ಟರೆ ನಾವು ಅದನ್ನು ಮಾಡಲಿಕ್ಕೆ ಸಿದ್ಧರಾಗಿದ್ದೇವೆ. ಈ ಗ್ರಾಮದ ಬಗ್ಗೆ ಹೇಳಬೇಕಾದರೆ ನಾನು ಚೀಫ್ ಇಂಜಿನಿಯರ್‌ರವರನ್ನು ಅಲ್ಲಿಗೆ ಕಳುಹಿಸುತ್ತೇನೆ. ಮಾನ್ಯ ಸದಸ್ಯರು ನಾನೇ ಅಲ್ಲಿಗೆ ಬರಬೇಕೆಂದು ಬಯಸುವುದಾದರೆ ನಾನೇ ಅಲ್ಲಿಗೆ ಬಂದು ನೋಡಲಿಕ್ಕೆ ನನ್ನದೇನೂ ತೊಂದರೆ ಇಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು : ಇದರ ಬಗ್ಗೆ ಇನ್ನು ಚರ್ಚೆ ಬೇಡ. ಒಂದು ಗಂಟೆಯ ಪ್ರಶ್ನೋತ್ತರ ಅವಧಿಯಲ್ಲಿ ಈ ಪ್ರಶ್ನೆ ಬಗ್ಗೆಯೇ 45 ನಿಮಿಷಗಳ ಕಾಲ ಚರ್ಚೆಯಾಗಿದೆ. ಆದ್ದರಿಂದ ದಯವಿಟ್ಟು ಈ ಬಗ್ಗೆ ಮತ್ತೆ ಚರ್ಚೆ ಬೇಡ. ಈಗ ಪ್ರಶ್ನೋತ್ತರ ಅವಧಿ ಮುಗಿಯಿತು. ನಮ್ಮ ಮುಂದೆ ಇನ್ನೂ ಐದು ಪ್ರಶ್ನೆಗಳಿವೆ, ಅದರ ಬಗ್ಗೆ ನಾನೀಗ ಹೇಳಿಬಿಡುತ್ತೇನೆ.

ಶ್ರೀ ಪಾಟೀಲ ಶಿವಾನಂದ ಸಿದ್ಧರಾಮಗೌಡ : ಮಾನ್ಯ ಅಧ್ಯಕ್ಷರೇ, ನಾನು ಡಿಸ್ಕಷನ್ ಮಾಡುವುದಿಲ್ಲ. ದಯವಿಟ್ಟು ತಾವು ಸ್ವಲ್ಪ ನಾನು ಹೇಳುವುದನ್ನು ಕೇಳಬೇಕು.

ಅಧ್ಯಕ್ಷರು : ಕ್ಷಮಿಸಿ, ಪ್ರಶ್ನೋತ್ತರ ಅವಧಿ ಮುಗಿಯಿತು. ನೀವು ಇನ್ನೇನಾದರೂ ಕೇಳುವುದಿದ್ದರೆ ಅರ್ಧ ಗಂಟೆ ಚರ್ಚೆ ನಡೆಸುವ ಸಲುವಾಗಿ ನೋಟೀಸ್ ಕಳುಹಿಸಿಕೊಡಿ. ನಾನು ಅದನ್ನು ಅಲೋ ಮಾಡುತ್ತೇನೆ.

(ಗೊಂದಲ)

ಶ್ರೀ ಪಾಟೀಲ ಶಿವಾನಂದ ಸಿದ್ಧರಾಮಗೌಡ : ಮಾನ್ಯ ಸಚಿವರು ಹೇಳಿರುವ ವಿಷಯದ ಬಗ್ಗೆ ಒಂದು ಸ್ಪಷ್ಟೀಕರಣ ಕೇಳಲಿಕ್ಕೂ ನಮಗೆ ಅಧಿಕಾರ ಇಲ್ಲವೇ?

ಅಧ್ಯಕ್ಷರು : ಆಯಿತು, ಅದೇನು ಕ್ಲಾರಿಫಿಕೇಷನ್ ಕೇಳಬೇಕೋ ಅದನ್ನು ಬೇಗ ಕೇಳಿ.